" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(313+314) 10–12–2018 (12–15+12–30) ಎಸ್‌ಪಿಆರ್+ಎಲ್‌ಎಂ–ಬಿಎನ್‌ಎಸ್

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ:10ನೇ ಡಿಸೆಂಬರ್ 2018
ಸೋಮವಾರ

## ವಿಷಯಾನುಕ್ರಮಣಿಕೆ

1. ಸಂತಾಪ ಸೂಚನೆಗಳು

   ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)
   ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

2. ನೂತನ ಸದಸ್ಯರ ಪರಿಚಯ
3. ಪ್ರಕಟಣೆ

~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಸೋಮವಾರ, ದಿನಾಂಕ: 10ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿನ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಅಪರಾಹ್ನ 12 ಗಂಟೆ 17 ನಿಮಿಷಕ್ಕೆ**

**'ವಂದೇ ಮಾತರಂ' ಗೀತೆಯೊಂದಿಗೆ ಸಮಾವೇಶಗೊಂಡಿತು.**

**ಹಂಗಾಮಿ ಸಭಾಪತಿ(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~

## 1. ಸಂತಾಪ ಸೂಚನೆಗಳು

**ಸಭಾಪತಿಯವರು:–** ಭಾರತದ ಮಾಜಿ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ, ಕೇಂದ್ರದ ಹಾಲಿ ಸಚಿವರು ಹಾಗೂ ಲೋಕಸಭೆಯ ಸದಸ್ಯರಾಗಿದ್ದ ಶ್ರೀ ಹೆಚ್.ಎನ್.ಅನಂತಕುಮಾರ್, ಲೋಕಸಭೆಯ ಮಾಜಿ ಸಭಾಧ್ಯಕ್ಷರಾಗಿದ್ದ ಶ್ರೀ ಸೋಮನಾಥ ಚಟರ್ಜಿ, ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭಾ ಸದಸ್ಯರಾಗಿದ್ದ ಶ್ರೀ ಸಿ.ಕೆ.ಜಾಫರ್ ಷರೀಫ್, ಕೇಂದ್ರ ಮತ್ತು ರಾಜ್ಯದ ಮಾಜಿ ಸಚಿವರಾಗಿದ್ದ ಡಾ:ಎಂ.ಹೆಚ್.ಅಂಬರೀಶ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಮೀರ್ ಅಜೀಜ್ ಅಹಮದ್, ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಓಂಪ್ರಕಾಶ್ ಕಣಗಲಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ತಿಪ್ಪೇಸ್ವಾಮಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಈಟಿ ಶಂಭುನಾಥ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್, ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ಎಂ.ಕರುಣಾನಿಧಿ, ಗದುಗಿನ ತೋಂಟದಾರ್ಯ ಡಾ:ಸಿದ್ದಲಿಂಗ ಸ್ವಾಮೀಜಿ, ಕನ್ನಡದ ಹಿರಿಯ ಸಾಹಿತಿಗಳಾದ ಡಾ:ಸುಮತೀಂದ್ರ ನಾಡಿಗ ಹಾಗೂ ಶ್ರೀ ಜಿ.ಹೋ.ನಾರಾಯಣಸ್ವಾಮಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

### 01. ಅಟಲ್ ಬಿಹಾರಿ ವಾಜಪೇಯಿ

ಭಾರತದ ಮಾಜಿ ಪ್ರಧಾನ ಮಂತ್ರಿ, ಕವಿ, ಹೆಸರಾಂತ ಪತ್ರಕರ್ತ, ಶ್ರೇಷ್ಠ ವಾಗ್ಮಿ, ಚಿಂತಕ, ದಾರ್ಶನಿಕ, ನಿಸ್ವಾರ್ಥ ರಾಜಕಾರಣಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರು ದಿನಾಂಕ:16/08/2018 ರಂದು ನಿಧನ ಹೊಂದಿರುತ್ತಾರೆ.

25ನೇ ಡಿಸೆಂಬರ್, 1924ರಂದು ಮಧ್ಯ ಪ್ರದೇಶದ ಗ್ವಾಲಿಯರ್ ಹತ್ತಿರದ ಶಿಂದೆ ಕಿ ಚವ್ವಾಣಿ ಎನ್ನುವ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವಿಕ್ಟೋರಿಯಾ ಕಾಲೇಜಿನಿಂದ (ಈಗಿನ ಲಕ್ಷ್ಮಿ ಬಾಯಿ ಕಾಲೇಜು) ಪದವಿಯನ್ನು ಪಡೆದು, ಹಿಂದಿ, ಇಂಗ್ಲೀಷ್ ಹಾಗೂ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದು, ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಕಾನ್ಪುರದ ಡಿ.ಎ.ವಿ. ಕಾಲೇಜಿನಿಂದ ಪಡೆದಿದ್ದರು.

ಭಾರತೀಯ ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ನಿಕಟವರ್ತಿಯಾಗಿ ಬೆಳೆದು, ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸೇರಿದರು. ವೀರ ಅರ್ಜುನ' ಹಾಗೂ 'ಪಾಂಚಜನ್ಯ' ಪತ್ರಿಕೆಗಳ ಪತ್ರಕರ್ತರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ರಾಜಕಾರಣಿಯಲ್ಲದೆ ಕವಿಯೂ ಆಗಿದ್ದರು. ಹಿಂದಿ ಭಾಷೆಯಲ್ಲಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಇವರ ಇಪ್ಪತ್ತೊಂದು ಕವಿತೆಗಳ ಸಂಕಲನ 'Twenty - One Poems' ಎಂಬ ಹೆಸರಿನಲ್ಲಿ ಆಂಗ್ಲಭಾಷೆಗೆ ಅನುವಾದಗೊಂಡಿದೆ. ಅಲ್ಲದೆ ಇವರು ಅನೇಕ ಪುಸ್ತಕಗಳನ್ನು ಸಹ ಬರೆದಿರುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಮ್ಮ ಆಡಳಿತದ ಅವಧಿಯಲ್ಲಿ ಇಡೀ ವಿಶ್ವವೇ ತಬ್ಬಿಬ್ಬಾಗುವಂತೆ ಮಾಡಿದ ಯಶಸ್ವಿ ಪೋಖ್ರಾನ್ ಅಣು ಪರೀಕ್ಷೆಯು "2ನೇ ಬಾರಿ ಬುದ್ಧ ನಸುನಕ್ಕ" ಎಂದೇ ಜಗಜ್ಜಾಹೀರಾಯಿತು. ಭಾರತ ಪಾಕ್ ಬಾಂಧವ್ಯಕ್ಕೆ ಕೊಂಡಿಯಾಗಿ ಲಾಹೋರ್ ಬಸ್ ಪ್ರಯಾಣ ಆರಂಭಿಸಿದ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ. ದೇಶದ ನಾಲ್ಕು ಮೂಲೆಗಳಿಗೂ ಸಂಪರ್ಕ ಕಲ್ಪಿಸುವ 15 ಸಾವಿರ ಕಿ.ಮೀ. ಉದ್ದದ 'ಸುವರ್ಣ ಚತುಷ್ಪಥ' ಹೆದ್ದಾರಿಯನ್ನು ದಾಖಲೆ ಸಮಯದಲ್ಲಿ ಪೂರ್ಣಗೊಳಿಸಿದ ಅಟಲ್‌ಜೀರವರ ಸಾಧನೆ ಅಸಾಮಾನ್ಯವಾದುದು. ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯನ್ನು ಜಾರಿಗೆ ತರುವ ಮೂಲಕ ಹಳ್ಳಿ ಹಳ್ಳಿಗಳಿಗೂ ರಸ್ತೆಯನ್ನು ಒದಗಿಸಿದ್ದಲ್ಲದೆ, 'ಸರ್ವ ಶಿಕ್ಷಾ ಅಭಿಯಾನ್' ಮೂಲಕ ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡಲು ಮುಂದಾಗಿದ್ದ ಶ್ರೀಯುತರು ಒಬ್ಬ ದೂರದೃಷ್ಟಿ ಹೊಂದಿದ್ದ ಮಹಾನ್ ನಾಯಕರಾಗಿದ್ದರು.

ಶ್ರೀಯುತರು ಭಾರತ ರತ್ನ, ಪದ್ಮ ವಿಭೂಷಣ, ಲೋಕಮಾನ್ಯ ತಿಲಕ್ ಪ್ರಶಸ್ತಿ, ಉತ್ತಮ ರಾಜಕೀಯ ಪಟು ಗೌರವ, ಪಂಡಿತ್ ಗೋವಿಂದ್ ವಲ್ಲಬ್ ಪಂತ್ ಪ್ರಶಸ್ತಿ, ಬಾಂಗ್ಲಾ ವಿಮೋಚನಾ ಪ್ರಶಸ್ತಿಗಳಲ್ಲದೆ ಇತರೆ ಹತ್ತು-ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ರಾಷ್ಟ್ರದ ಹಿರಿಯ ಪ್ರಜೆ, ಸಭ್ಯ ರಾಜಕಾರಣಿ ಮತ್ತು ಗೌರವಾನ್ವಿತ ಮುತ್ಸದ್ದಿ, ಕವಿ ಹೃದಯದ ಮಾನವತಾವಾದಿ, ಭಾರತೀಯ ರಾಜಕೀಯ ರಂಗದ ಭೀಷ್ಮ ಪಿತಾಮಹರೆಂದೇ ಖ್ಯಾತಿ ಪಡೆದಿದ್ದ ಶೀಯುತರ ನಿಧನದಿಂದ ರಾಷ್ಟ್ರವು ಒಬ್ಬ ಶ್ರೇಷ್ಠ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## 02. ಹೆಚ್.ಎನ್.ಅನಂತಕುಮಾರ್

ಕೇಂದ್ರದ ಹಾಲಿ ಸಚಿವರು ಹಾಗೂ ಲೋಕಸಭೆಯ ಸದಸ್ಯರಾಗಿದ್ದ ಶ್ರೀ ಹೆಚ್.ಎನ್. ಅನಂತಕುಮಾರ್ ಅವರು ದಿನಾಂಕ:12/11/2018 ರಂದು ನಿಧನ ಹೊಂದಿರುತ್ತಾರೆ.

22ನೇ ಜುಲೈ 1959ರಂದು ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಹಾಗೂ ಎಲ್.ಎಲ್.ಬಿ. ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

ಶ್ರೀಯುತರು 1982 ರಿಂದ 1985ರವರೆಗೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದರು. ಭಾರತೀಯ ಜನತಾ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯ ಬಿಜೆಪಿಯ ಕಾರ್ಯದರ್ಶಿ, ರಾಜ್ಯ ಯುವ ಮೋರ್ಚಾದ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯನಿರ್ವಹಿಸಿದ್ದ ಇವರು ಉತ್ತಮ ವಾಗ್ಮಿ ಎಂದು ಹೆಸರಾಗಿದ್ದರು. ಕೇಂದ್ರದಲ್ಲಿ ರಾಜ್ಯದ ಸಮಸ್ಯೆಗಳು ಎದುರಾದಾಗ ಅವುಗಳನ್ನು ಪರಿಹರಿಸಲು ನೇತೃತ್ವವನ್ನು ವಹಿಸುತ್ತಿದ್ದ ಶ್ರೀಯುತರು ಸರಳ ಸಜ್ಜನಿಕೆ ಸ್ವಭಾವದವರಾಗಿದ್ದು, ಪಕ್ಷಾತೀತವಾದ ವರ್ಚಸ್ಸನ್ನು ಬೆಳೆಸಿಕೊಂಡಿದ್ದರು. ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ಕನ್ನಡದಲ್ಲಿ ಮಾತನಾಡಿದ ಮೊದಲ ವ್ಯಕ್ತಿ ಎಂಬ ಕೀರ್ತಿಗೆ ಭಾಜನರಾಗಿದ್ದರು. ಕ್ಯಾನ್ಸರ್ ಪೀಡಿತ ರೋಗಿಗಳ ಸಹಾಯಕ್ಕೆ ಶ್ರಮಿಸಿದ್ದ ಶ್ರೀಯುತರ ಪರಿಶ್ರಮದ ಫಲವಾಗಿ ಬೆಂಗಳೂರಿನ ಶಂಕರಪುರಂನಲ್ಲಿ ಆರು ಅಂತಸ್ತಿನ ವಿಶಾಲ ಕಟ್ಟಡದಲ್ಲಿ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್ ಮತ್ತು ಸಂಶೋಧನಾ ಕೇಂದ್ರ 2012ರಲ್ಲಿ ಪ್ರಾರಂಭಗೊಂಡಿತು.

ಶ್ರೀಯುತರು 11, 12, 13, 14, 15 ಹಾಗೂ 16ನೇ ಲೋಕಸಭೆಗೆ ಆರು ಬಾರಿ ಸತತವಾಗಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದು, ದಿ.ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಖಾತೆ, ಪ್ರವಾಸೋದ್ಯಮ, ಕ್ರೀಡೆ, ಯುವ ವ್ಯವಹಾರ ಮತ್ತು ಸಂಸ್ಕೃತಿ, ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನೆ ಖಾತೆ, ಗ್ರಾಮೀಣಾಭಿವೃದ್ಧಿ ಸಚಿವರಾಗಿ ಹಾಗೂ ಶ್ರೀ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಸಂಸದೀಯ ವ್ಯವಹಾರಗಳು, ರಾಸಾಯನಿಕ ರಸಗೊಬ್ಬರ ಮತ್ತು ಔಷಧ ಖಾತೆಯ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರ ಹಾಗೂ ರಾಜ್ಯವು ಯುವ ನೇತಾರ, ಅತ್ಯಂತ ಪ್ರತಿಭಾವಂತ ಸಂಸದೀಯ ಪಟು, ಭಾರತೀಯ ಜನತಾ ಪಕ್ಷದ ಮುಖಂಡ ಮತ್ತು ಒಬ್ಬ ಉತ್ತಮ ರಾಜಕೀಯ ಧುರೀಣನನ್ನು ಕಳೆದುಕೊಂಡಂತಾಗಿದೆ.

**03. ಸೋಮನಾಥ ಚಟರ್ಜಿ**

ಹಿರಿಯ ಕಮ್ಯುನಿಸ್ಟ್ ಮುಖಂಡ ಹಾಗೂ ಲೋಕಸಭೆಯ ಮಾಜಿ ಸಭಾಧ್ಯಕ್ಷರಾಗಿದ್ದ ಶ್ರೀ ಸೋಮನಾಥ ಚಟರ್ಜಿ ಅವರು ದಿನಾಂಕ: 13/08/2018 ರಂದು ನಿಧನ ಹೊಂದಿರುತ್ತಾರೆ.

25ನೇ ಜುಲೈ, 1929ರಂದು ಅಸ್ಸಾಂ ರಾಜ್ಯದ ತೇಜ್‌ಪುರ್‌ನಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಹಾಗೂ ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

1971ರಲ್ಲಿ ಮೊದಲ ಬಾರಿಗೆ ಲೋಕಸಭೆಗೆ ಬರ್ದ್ವಾನ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. 1985ರಿಂದ 2005ರವರೆಗೆ ಬಿರ್ಬಮ್ ಜಿಲ್ಲೆಯ ಬೋಲ್ಪುರ್ ಕ್ಷೇತ್ರದಿಂದ 7 ಬಾರಿ ಸತತವಾಗಿ ಜಯಗಳಿಸಿದ ಶ್ರೀಯುತರು 1994ರಲ್ಲಿ ಅತ್ಯುತ್ತಮ ಸಂಸತ್ ಸದಸ್ಯ ಪ್ರಶಸ್ತಿಯನ್ನು ಗಳಿಸಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹತ್ತು ಬಾರಿ ಲೋಕಸಭಾ ಸದಸ್ಯರಾಗಿದ್ದ ಶ್ರೀಯುತರು ಲೋಕ ಸಭೆಯ 13ನೇ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಯುತರು ಬಹುಪಾಲು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ ಪಕ್ಷದೊಂದಿಗೆ ಸಂಬಂಧ ಹೊಂದಿದ್ದ ಒಬ್ಬ ಸಮತಾವಾದಿ ರಾಜಕಾರಣಿಯಾಗಿದ್ದರು. 2004 ರಿಂದ 2009ರವರೆಗೆ 14ನೇ ಲೋಕಸಭೆಯ ಸಭಾಧ್ಯಕ್ಷರಾಗಿ ಅದ್ಭುತ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದರು. ಈ ಅವಧಿಯಲ್ಲಿ "ಡಿಡಿ ಲೋಕಸಭೆಯನ್ನು" "ಲೋಕಸಭೆ ಟಿವಿ" ಎಂದು ಬದಲಾಯಿಸಿದುದು ಸಂಸತ್ತಿನ ಹೆಚ್ಚಿನ ಪಾರದರ್ಶಕತೆಗೆ ಹೆಜ್ಜೆ ಎಂದು ಗುರುತಿಸಲ್ಪಟ್ಟಿತು.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಹಿರಿಯ ಹಾಗೂ ಶ್ರೇಷ್ಠ ಸಂಸದೀಯ ಪಟುವನ್ನು ಕಳೆದುಕೊಂಡಂತಾಗಿದೆ.

**04. ಸಿ.ಕೆ. ಜಾಫರ್ ಷರೀಫ್**

ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭಾ ಸದಸ್ಯರಾಗಿದ್ದ ಶ್ರೀ ಸಿ.ಕೆ.ಜಾಫರ್ ಷರೀಫ್ ರವರು ದಿನಾಂಕ: 25/11/2018 ರಂದು ನಿಧನ ಹೊಂದಿರುತ್ತಾರೆ.

03ನೇ ನವೆಂಬರ್, 1933 ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪಟ್ಟಣದ ದೊಡ್ಡೇರಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು.

ಸರ್ಕಾರಿ ಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪೂರ್ಣಗೊಳಿಸಿ, ಕಾರು ಚಾಲಕರಾಗಿ ಬದುಕು ಆರಂಭಿಸಿದ ಶ್ರೀಯುತರು ತಮ್ಮ ಹರಿತ ಬುದ್ಧಿಶಕ್ತಿ ಮತ್ತು ಲೌಕಿಕ ವ್ಯವಹಾರಿಕ ಪ್ರಜ್ಞೆ ಹಾಗೂ ವಿಶಿಷ್ಟ ದಿಟ್ಟತನವನ್ನು ಹೊಂದಿದ್ದರಲ್ಲದೆ ಎಲ್ಲರೊಂದಿಗೆ ರಾಜಕೀಯವನ್ನು ಮೀರಿದ ಉತ್ತಮ ಒಡನಾಟವನ್ನು ಹೊಂದಿದ್ದರು.

1971ರಲ್ಲಿ ಪ್ರಥಮ ಬಾರಿಗೆ ಕನಕಪುರದಿಂದ ಲೋಕಸಭೆಗೆ ಸದಸ್ಯರಾಗಿ ನಂತರ 1977 ರಿಂದ 1996 ರವರೆಗೆ ಸತತವಾಗಿ 7 ಬಾರಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ರಾಜ್ಯ ರೈಲ್ವೆ ಯೋಜನೆಗಳಿಗೆ ಅವರು ಸಾಕಷ್ಟು ಶ್ರಮವಹಿಸಿದ್ದರು. ಮೈಸೂರು ಮತ್ತು ಬೆಂಗಳೂರು ನಡುವೆ 'ಚಾಮುಂಡಿ ಎಕ್ಸ್‌ಪ್ರೆಸ್' ಮತ್ತು 'ಟಿಪ್ಪು ಎಕ್ಸ್‌ಪ್ರೆಸ್' ರೈಲು, ಚಿತ್ರದುರ್ಗ–ತುಮಕೂರು ಮಾರ್ಗವಾಗಿ ಬೆಂಗಳೂರಿಗೆ ನೇರ ರೈಲು ಮಾರ್ಗ, ಹುಬ್ಬಳ್ಳಿ–ಧಾರವಾಡದಿಂದ ಬೆಂಗಳೂರಿಗೆ ನೇರ ರೈಲು ಮಾರ್ಗ ಆರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇವರ ಅವಧಿಯಲ್ಲಿಯೇ ಶತಾಬ್ದಿ ಮತ್ತು ರಾಜಧಾನಿ ರೈಲ್ವೆ ಸೇವೆಯನ್ನು ಕರ್ನಾಟಕದಿಂದ ಪ್ರಾರಂಭಿಸಲಾಯಿತು. ರಾಷ್ಟ್ರದಲ್ಲಿನ ನ್ಯಾರೋ ಗೇಜ್, ಮೀಟರ್ ಗೇಜ್‌ಗಳ ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತಿಸುವ ಮೂಲಕ ದೇಶದಲ್ಲಿಯೇ ರೈಲ್ವೆ ಕ್ರಾಂತಿಯನ್ನು ಮಾಡಿ "ರೈಲ್ವೆ ಬ್ರಾಡ್‌ಗೇಜ್ ಹರಿಕಾರ" ಎಂದೇ ಪ್ರಖ್ಯಾತಿ ಹೊಂದಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀಯುತರು ಬೆಂಗಳೂರಿನ ಯಲಹಂಕದಲ್ಲಿ ರೈಲ್ವೆ ಗಾಲಿ ಮತ್ತು ಅಚ್ಚು ಕಾರ್ಖಾನೆ ಪ್ರಾರಂಭಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದರು.

ಶ್ರೀಯುತರು 1980–1984ರಲ್ಲಿ ದಿ॥ ಇಂದಿರಾಗಾಂಧಿರವರ ಸಂಪುಟದಲ್ಲಿ ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವರಾಗಿ, 1984 ರಲ್ಲಿ ದಿ॥ ರಾಜೀವ್ ಗಾಂಧಿರವರ ಸಂಪುಟದಲ್ಲಿ ನೀರಾವರಿ ಖಾತೆಯ ರಾಜ್ಯ ಸಚಿವರಾಗಿ, 1988–89ರಲ್ಲಿ ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವರಾಗಿ ಹಾಗೂ 1991–1995 ರಲ್ಲಿ ದಿ॥ ಪಿ.ವಿ.ನರಸಿಂಹರಾವ್‌ರವರ ಸಂಪುಟದಲ್ಲಿ ಪುನಃ ಕೇಂದ್ರ ರೈಲ್ವೆ ಸಚಿವರಾಗಿ ಅನನ್ಯ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರ ಹಾಗೂ ರಾಜ್ಯವು ಹಿರಿಯ ರಾಜಕಾರಣಿ ಹಾಗೂ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ಕಳೆದುಕೊಂಡಂತಾಗಿದೆ.

**<u>05. ಡಾ:ಎಂ.ಹೆಚ್.ಅಂಬರೀಷ್</u>**

ಕನ್ನಡ ಚಲನಚಿತ್ರ ರಂಗದ ದಿಗ್ಗಜರಲ್ಲಿ ಒಬ್ಬರಾದ ಹಾಗೂ ಕೇಂದ್ರ ಮತ್ತು ರಾಜ್ಯದ ಮಾಜಿ ಸಚಿವರಾದ ಡಾ:ಎಂ.ಹೆಚ್.ಅಂಬರೀಷ್ ಅವರು ದಿನಾಂಕ:24/11/2018ರಂದು ನಿಧನ ಹೊಂದಿರುತ್ತಾರೆ.

ಮಳವಳ್ಳಿ ಹುಚ್ಚೇಗೌಡ ಅಮರನಾಥ್ ಅವರು 29ನೇ ಮೇ, 1952ರಂದು ಮಂಡ್ಯ ಜಿಲ್ಲೆಯ ದೊಡ್ಡರಸಿನಕೆರೆ ಗ್ರಾಮದಲ್ಲಿ ಜನಿಸಿದ್ದು, ಖ್ಯಾತ ಪಿಟೀಲು ವಿದ್ವಾನ್ ಟಿ.ಚೌಡಯ್ಯ ಅವರ ಮೊಮ್ಮಗನಾಗಿದ್ದು, ವೃತ್ತಿಯಲ್ಲಿ ನಟ ಹಾಗೂ ಸಮಾಜ ಸೇವಕರಾಗಿದ್ದರು.

1973ರಲ್ಲಿ ಶ್ರೀ ಪುಟ್ಟಣ್ಣ ಕಣಗಾಲ್ ನಿರ್ದೇಶನದ "ನಾಗರ ಹಾವು" ಚಿತ್ರದ 'ಜಲೀಲ'ನ ಪಾತ್ರದ ಮೂಲಕ ಕನ್ನಡ ಚಲನಚಿತ್ರ ರಂಗಕ್ಕೆ ಪಾದಾರ್ಪಣೆ ಮಾಡಿದರು. ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶಿಸಿದ ಶ್ರೀ ಹೆಚ್.ಕೆ.ಅನಂತರಾವ್ ಅವರ ಕಾದಂಬರಿ ಆಧಾರಿತ "ಅಂತ" ಚಿತ್ರದ ನಾಯಕನಾಗಿ ಅನ್ಯಾಯದ ವಿರುದ್ಧ ಸಿಡಿದೇಳುವ ಪಾತ್ರದಿಂದಾಗಿ "ರೆಬೆಲ್ ಸ್ಟಾರ್" ಎಂಬ ಹೆಸರಿಗೆ ಪಾತ್ರರಾದರು. ಖಳ ನಾಯಕನಿಂದ ನಾಯಕನಾಗಿ ವಿವಿಧ ಪಾತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ ಅವರು ಸುಮಾರು 200ಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ನಟಿಸಿದ್ದರು. ಕನ್ನಡ ಚಿತ್ರರಂಗದ ಹಿರಿಯ ನಾಯಕ ನಟರಾಗಿ ಚಿತ್ರರಂಗವನ್ನು ಮುನ್ನಡೆಸುತ್ತಿದ್ದ ಅವರು ಅಜಾತಶತ್ರುವಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. 1982ರಲ್ಲಿ "ಅಂತ" ಚಿತ್ರದ ಅಭಿನಯಕ್ಕಾಗಿ 'ಕರ್ನಾಟಕ ರಾಜ್ಯ ವಿಶೇಷ ಪ್ರಶಸ್ತಿ', 1985–86ರಲ್ಲಿ 'ಮಸಣದ ಹೂವು' ಚಿತ್ರಕ್ಕೆ 'ಅತ್ಯುತ್ತಮ ಪೋಷಕ ನಟ ಪ್ರಶಸ್ತಿ', "ಒಲವಿನ ಉಡುಗೂರೆ" ಚಿತ್ರದ ಅಭಿನಯಕ್ಕಾಗಿ 'ಫಿಲ್ಮ್ ಫೇರ್ ಅತ್ಯುತ್ತಮ ನಟ ಪ್ರಶಸ್ತಿ', 2005ರಲ್ಲಿ 'ಎನ್.ಟಿ.ಆರ್. ರಾಷ್ಟ್ರೀಯ ಪ್ರಶಸ್ತಿ', 2009ರಲ್ಲಿ ಆಂಧ್ರ ಪ್ರದೇಶ ಸರ್ಕಾರದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

'ನಂದಿ ಪ್ರಶಸ್ತಿ', 2013ರಲ್ಲಿ 'ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ'ಗಳಲ್ಲದೆ ಇತರೆ ಹತ್ತು–ಹಲವಾರು ಪ್ರಶಸ್ತಿ–ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದರು.

1994ರಲ್ಲಿ ಕಾಂಗ್ರೆಸ್ ಪಕ್ಷ ಸೇರುವ ಮೂಲಕ ರಾಜಕೀಯ ಪ್ರವೇಶಿಸಿದ ಶ್ರೀಯುತರು 1996ರಲ್ಲಿ ಜನತಾದಳ ಪಕ್ಷಕ್ಕೆ ಸೇರ್ಪಡೆಗೊಂಡರು. ತದನಂತರ 1998ರಲ್ಲಿ ಪುನಃ ಕಾಂಗ್ರೆಸ್ ಪಕ್ಷಕ್ಕೆ ಸೇರಿ 12, 13 ಮತ್ತು 14ನೇ ಲೋಕಸಭಾ ಸದಸ್ಯರಾಗಿ ಹಾಗೂ 14ನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಅಲ್ಲದೆ, 2006 ರಲ್ಲಿ ಕೇಂದ್ರದ ಶ್ರೀ ಮನಮೋಹನ್ ಸಿಂಗ್ ಅವರ ಸಂಪುಟದಲ್ಲಿ ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವರಾಗಿ, 2013ರಲ್ಲಿ ಶ್ರೀ ಸಿದ್ಧರಾಮಯ್ಯ ರವರ ಸಂಪುಟದಲ್ಲಿ ವಸತಿ ಸಚಿವರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ನಾಡಿನ ಭಾಷೆ, ನೆಲ, ಜಲದ ಪ್ರಶ್ನೆ ಬಂದಾಗ ಅವರು ತೋರಿದ ಕಾಳಜಿ ಅನನ್ಯ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರ ಹಾಗೂ ರಾಜ್ಯವು ಕನ್ನಡ ಚಲನಚಿತ್ರ ರಂಗದ ದಿಗ್ಗಜ ಹಿರಿಯ ಪ್ರತಿಭಾವಂತ ಕಲಾರತ್ನ ಸ್ನೇಹ ಜೀವಿ ಹಾಗೂ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## 06. ಮೀರ್ ಅಜೀಜ್ ಅಹಮದ್

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಮೀರ್ ಅಜೀಜ್ ಅಹಮದ್ ಅವರು ದಿನಾಂಕ: 30/11/2018 ರಂದು ನಿಧನ ಹೊಂದಿರುತ್ತಾರೆ.

05ನೇ ಜುಲೈ, 1934ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿದ್ದ ಶ್ರೀಯುತರು ಕಲಾ ವಿಭಾಗದಲ್ಲಿ ಇಂಟರ್ ಮೀಡಿಯೆಟ್ ವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀಯುತರು ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಪಕ್ಷವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ, ವಕ್ಫ್ ಬೋರ್ಡ್ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಅಧ್ಯಕ್ಷರಾಗಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರಲ್ಲದೆ, ಎಂ.ಎಂ.ಎಸ್. ಎಸ್.ಟಿ.ಎ. ಬಸ್‌ಗಳ ಮಾಲೀಕರಾಗಿ ಸ್ಥಳೀಯರಿಗೆ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿರುತ್ತಾರೆ. 2004 ರಿಂದ 2010ರವರೆಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸಹ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ನಮ್ಮ ನಾಡು ಹಿರಿಯ ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 07. ಓಂಪ್ರಕಾಶ್ ಕಣಗಲಿ

ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಓಂಪ್ರಕಾಶ್ ಕಣಗಲಿ ಅವರು ದಿನಾಂಕ: 06/11/2018 ರಂದು ನಿಧನ ಹೊಂದಿರುತ್ತಾರೆ.

17ನೇ ಫೆಬ್ರವರಿ, 1950ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

ಶ್ರೀಯುತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಲ್ಲದೆ, ಇವರು ನಿರ್ದೇಶಕರು, ಕೆನರಾ ಬ್ಯಾಂಕ್, ಬೆಳಗಾವಿ ಜಿಲ್ಲೆಯ ವಕೀಲರ ಸಂಘದ ಅಧ್ಯಕ್ಷರಾಗಿ, ಆದರ್ಶ ಹೌಸಿಂಗ್ ಸೊಸೈಟಿಯ ಅಧ್ಯಕ್ಷರಾಗಿ, ಮಹಾತ್ಮ ಗಾಂಧಿ ಹ್ಯಾಂಡ್‌ಲೂಮ್ ವೀವರ್ಸ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಹುಕ್ಕೇರಿ ತಾಲ್ಲೂಕಿನ ಕೊಟಬಾಗಿ ಏತ ನೀರಾವರಿ ಯೋಜನೆ ಸೇರಿದಂತೆ ಹಲವಾರು ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಅವಿರತವಾಗಿ ಶ್ರಮಿಸಿದ್ದರು.

1990–1996ರ ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಶ್ರೀ ಎಂ. ವೀರಪ್ಪ ಮೊಯ್ಲಿ ಅವರ ಮಂತ್ರಿಮಂಡಲದಲ್ಲಿ ಬೃಹತ್ ನೀರಾವರಿ ರಾಜ್ಯ ಸಚಿವರಾಗಿ ಹಾಗೂ ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ನಮ್ಮ ನಾಡು ಒಬ್ಬ ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## 08. ತಿಪ್ಪೇಸ್ವಾಮಿ

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ತಿಪ್ಪೇಸ್ವಾಮಿ ಅವರು ದಿನಾಂಕ: 08/08/2018 ರಂದು ನಿಧನ ಹೊಂದಿರುತ್ತಾರೆ.

20ನೇ ಮೇ, 1944 ರಂದು ಚಳ್ಳಕೆರೆ ತಾಲ್ಲೂಕಿನ ಭರಮಸಾಗರ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಹತ್ತನೆ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀಯುತರು ಪುರಸಭೆ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರಲ್ಲದೆ, 1983ರಲ್ಲಿ ಜನತಾ ಪಕ್ಷ ಸೇರಿ ತಾಲ್ಲೂಕು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. 08ನೇ, 10ನೇ ಮತ್ತು 13ನೇ ವಿಧಾನ ಸಭೆಯ ಸದಸ್ಯರಾಗಿ ಚಳ್ಳಕೆರೆ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು, ಶ್ರೀ ಹೆಚ್.ಡಿ.ದೇವೇಗೌಡ ರವರ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಹಾಗೂ ದಿ॥ಜೆ.ಹೆಚ್.ಪಟೇಲ್ ರವರ ಸಂಪುಟದಲ್ಲಿ ಸಣ್ಣ ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ನಾಲ್ಕು ದಶಕಗಳ ಕಾಲ ರಾಜಕೀಯ ಹೋರಾಟ ನಡೆಸಿದ್ದ ಶ್ರೀಯುತರು ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿಯಲ್ಲಿ ಶ್ರೀ ವಾಲ್ಮೀಕಿ ಗುರುಪೀಠ ಸ್ಥಾಪಿಸುವಲ್ಲಿ ನೀಡಿದ್ದ ಕೊಡುಗೆ ಅಪಾರವಾದುದಾಗಿದ್ದು, 2017–18ನೇ ಸಾಲಿನ ಮಹರ್ಷಿ ವಾಲ್ಮೀಕಿ ಜಯಂತಿ ಪ್ರಶಸ್ತಿಗೆ ಅವರು ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ನಮ್ಮ ನಾಡು ಒಬ್ಬ ಹಿರಿಯ ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**09.ಈ.ಟಿ. ಶಂಭುನಾಥ**

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಈ.ಟಿ.ಶಂಭುನಾಥ ಅವರು ದಿನಾಂಕ: 09/08/2018 ರಂದು ನಿಧನ ಹೊಂದಿರುತ್ತಾರೆ.

21ನೇ ಮೇ, 1943ರಂದು ಹೂವಿನಹಡಗಲಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಇ., ಸಿವಿಲ್ ಇಂಜಿನಿಯರಿಂಗ್ ಪದವೀಧರರಾಗಿದ್ದು, ವೃತ್ತಿಯಲ್ಲಿ ಸಮಾಲೋಚಕ ಅಭಿಯಂತರರಾಗಿದ್ದರು.

ಶ್ರೀಯುತರು ಶೈಕ್ಷಣಿಕ ಸಂಸ್ಥೆಗಳ ಹಾಗೂ ಹಿಂದುಳಿದ ಸಂಘಗಳ ನಿರ್ದೇಶಕರಾಗಿ, ಸುಧಾರಿತ ಕೃಷಿ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದ್ದರಲ್ಲದೆ, 1989ರಲ್ಲಿ ಹೂವಿನ ಹಡಗಲಿ ಕ್ಷೇತ್ರದಿಂದ 9ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು, 1990ರಲ್ಲಿ ದಿ॥ ಎಸ್.ಬಂಗಾರಪ್ಪ ರವರ ಸಂಪುಟದಲ್ಲಿ ಅರಣ್ಯ ಖಾತೆ ರಾಜ್ಯ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಕನಕ ಗುರುಪೀಠ ಸ್ಥಾಪನೆಗೆ ಶ್ರಮಿಸಿದ್ದರು.

ಶ್ರೀಯುತರ ನಿಧನದಿಂದಾಗಿ ನಮ್ಮ ನಾಡು ಒಬ್ಬ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**10. ವಿಮಲಾಬಾಯಿ ಜಗದೇವರಾವ್ ದೇಶಮುಖ್**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಜಿ ಸಚಿವರಾಗಿದ್ದ ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ ಅವರು ದಿನಾಂಕ:22/07/2018 ರಂದು ನಿಧನ ಹೊಂದಿರುತ್ತಾರೆ.

21ನೇ ಅಕ್ಟೋಬರ್, 1949 ರಂದು ಬೆಳಗಾವಿ ಜಿಲ್ಲೆಯ ಮುರಗೋಡ್ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಹತ್ತನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ವಿಶೇಷವಾಗಿ ಶ್ರಮಿಸಿದ್ದ ಶ್ರೀಯುತರು 1994 ರಲ್ಲಿ ಮುದ್ದೇಬಿಹಾಳ್ ವಿಧಾನಸಭೆ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ, ದಿ॥ ಜೆ.ಹೆಚ್.ಪಟೇಲ್ ರವರ ಸಚಿವ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**11. ಎಂ.ಕರುಣಾನಿಧಿ**

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಹಿರಿಯ ನೇತಾರ ಎಂ.ಕರುಣಾನಿಧಿ ಅವರು ದಿನಾಂಕ: 07/08/2018 ರಂದು ನಿಧನ ಹೊಂದಿರುತ್ತಾರೆ.

3ನೇ ಜೂನ್, 1924 ರಂದು ಚೆನ್ನೈನ ನಾಗಪಟ್ಟಣಂ ಜಿಲ್ಲೆಯ ಥಿರುಕ್ಕುವಲೈನಲ್ಲಿ ಜನಿಸಿದ್ದ ಶ್ರೀಯುತರು ದೇಶ ಕಂಡ ತಮಿಳುನಾಡಿನ ಮೇರು ರಾಜಕಾರಣಿಯಾಗಿದ್ದರು. 1957ರಿಂದ ಇಲ್ಲಿಯವರೆಗೂ ಶಾಸಕರಾಗಿ ಆಯ್ಕೆಯಾಗಿ ಸೋಲಿಲ್ಲದ ಸರದಾರರಾಗಿದ್ದ ಶ್ರೀಯುತರು 1969ರಲ್ಲಿ ಮೊದಲ ಬಾರಿಗೆ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದರಲ್ಲದೆ, ಐದು ಬಾರಿ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ರಾಜಕೀಯದಲ್ಲಿ ಮಾತ್ರವಲ್ಲದೆ, ತಮಿಳು ಸಾಹಿತ್ಯ ಹಾಗೂ ಚಲನಚಿತ್ರ ರಂಗಕ್ಕೆ ಕೊಟ್ಟಿರುವ ಕೊಡುಗೆ ಅನನ್ಯವಾದುದು.

ಶ್ರೀಯುತರ ನಿಧನದಿಂದ ರಾಷ್ಟ್ರವು ಹಿರಿಯ ಸಜ್ಜನ ರಾಜಕಾರಣಿ, ಸಾಹಿತಿ, ಬರಹಗಾರ ಹಾಗೂ ಬಹುಮುಖ ಪ್ರತಿಭೆಯೊಂದನ್ನು ಕಳೆದುಕೊಂಡಂತಾಗಿದೆ.

**12. ಡಾ: ತೋಂಟದಾರ್ಯ ಸಿದ್ದಲಿಂಗ ಸ್ವಾಮೀಜಿ**

ಪ್ರಗತಿಪರ ವಿಚಾರಧಾರೆಯೊಂದಿಗೆ ಸಮಾನತೆ ಮತ್ತು ಶಿಕ್ಷಣದ ಮಹತ್ವ ಸಾರುತ್ತ ದೀನ–ದಲಿತರ ಏಳ್ಗೆಯನ್ನು ಬಯಸುತ್ತಿದ್ದ ತೋಂಟದ ಡಾ:ಸಿದ್ದಲಿಂಗ ಸ್ವಾಮೀಜಿ ರವರು ದಿನಾಂಕ: 20/10/2018 ರಂದು ನಿಧನ ಹೊಂದಿರುತ್ತಾರೆ.

21ನೇ ಫೆಬ್ರವರಿ, 1949ರಂದು ವಿಜಯಪುರ ಜಿಲ್ಲೆಯ, ಸಿಂದಗಿ ಪಟ್ಟಣದ ಕೋರವಾರ ಗ್ರಾಮದಲ್ಲಿ ಜನಸಿದ್ದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು.

15ನೇ ಶತಮಾನದ ಶಿವಯೋಗಿ ಎಡೆಯೂರು ತೋಂಟದ ಸಿದ್ದಲಿಂಗ ಶ್ರೀಗಳ ವಾರಸುದಾರಿಕೆಯ ಮಠ, ತೋಂಟದಾರ್ಯ ಸಂಸ್ಥಾನ ಮಠ, ಅಲ್ಲಮಪ್ರಭು ಪೀಠ ಪರಂಪರೆಯ ಈ ಮಠದ 19ನೇ ಪೀಠಾಧಿಪತಿಯಾಗಿ ನೇಮಕಗೊಂಡಿದ್ದರು. ಸತ್ಯ ನಿರೂಪಣೆಗೆ ಸಂಘರ್ಷ ಅನಿವಾರ್ಯ ಎನ್ನುತ್ತಿದ್ದ ತೋಂಟದಾರ್ಯ ಮಠದ ಸಿದ್ದಲಿಂಗ ಸ್ವಾಮೀಜಿರವರು ಬದುಕಿನುದ್ದಕ್ಕೂ ಸಮಾನತೆಯ ಮೌಲ್ಯಗಳನ್ನು ಸಮಾಜದಲ್ಲಿ ಜಾತಿ, ಮತ, ಲಿಂಗ ಭೇದವಿಲ್ಲದೇ ಅನುಷ್ಠಾನಗೊಳಿಸಲು ಹೋರಾಟ ನಡೆಸಿದ್ದರು. ಗದುಗಿನ ವಿರಕ್ತ ಪರಂಪರೆಯ ಪೀಠವನ್ನೇರಿದರೂ ಅವರಲ್ಲಿ ತಮ್ಮ ಬಾಲ್ಯದ ನೆನಪುಗಳು ಹಾಗೆಯೇ ಇದ್ದವು. ಜನರ ಜಗದ್ಗುರು ಆಗಲು ಅವರು ಬೆಳೆದು ಬಂದ ಪರಂಪರೆಯೇ ಸಾಕ್ಷಿಯಾಗಿತ್ತು. ಹಸಿದು ಬಂದವರಿಗೆ ಉಪದೇಶ ಮಾಡದೇ, ‘ಮೊದಲು ಪ್ರಸಾದ ಮಾಡ್ರಿ’ ಎಂದು ಅಕ್ಕರೆಯಿಂದ ಹೇಳಿ ನಂತರ ಮಾತಿಗೆ ಇಳಿಯುತ್ತಿದ್ದರು. ಪ್ರಗತಿಪರ ವಿಚಾರದಾರೆಯೊಂದಿಗೆ ಸಮಾನತೆ ಮತ್ತು ಶಿಕ್ಷಣದ ಮಹತ್ವ ಸಾರುತ್ತ ದೀನ–ದಲಿತರ ಏಳ್ಗೆಯನ್ನು ಬಯಸುತ್ತಿದ್ದ ಶ್ರೀಯುತರು ದಲಿತ, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳನ್ನು ಮಠದಲ್ಲಿಟ್ಟುಕೊಂಡು ಅವರನ್ನು ಮಠಾಧೀಶರನ್ನಾಗಿ ಮಾಡಿದ ಕೀರ್ತಿಗೆ ಭಾಜನರಾಗಿದ್ದರು. ದೆಹಲಿಯ ಕರೋಲಭಾಗದ ಜಾಟವಾ ಜನಾಂಗದ ಭಕ್ತರಿಗೆ ಬಸವ ಧರ್ಮ ದೀಕ್ಷೆ ನೀಡುವ ಮೂಲಕ ಕನ್ನಡ ನಾಡಿನಾಚೆಗೂ ಬಸವತತ್ವ ಪ್ರಚಾರ ಕೈಗೊಂಡಿದ್ದರು. ಬಸವಾದಿ ಶರಣರ ವಚನ ಸಾಹಿತ್ಯ ಸೇರಿದಂತೆ 500ಕ್ಕೂ ಹೆಚ್ಚು ಶೀರ್ಷಿಕೆಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಾಡು, ನುಡಿ, ನೆಲ, ಜಲದ ಪ್ರಶ್ನೆ ಬಂದಾಗ ಸ್ವಾಮೀಜಿಯವರು ಹೋರಾಟ ನಡೆಸಿದ್ದರು. ಗೋಕಾಕ ಚಳವಳಿಯಲ್ಲಿ ಅವರ ನಿರಂತರ ಹೋರಾಟ ಸ್ಮರಣೀಯವಾದುದ್ದು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವಂತೆ, ನಂಜುಂಡಪ್ಪ ವರದಿ ಅನುಷ್ಠಾನಗೊಳಿಸುವಂತೆ, ಬೆಳಗಾವಿ ಗಡಿ ಸಮಸ್ಯೆ ಪರಿಹಾರಕ್ಕಾಗಿ ಉತ್ತರ ಕರ್ನಾಟಕಕ್ಕೆ ಮಳೆ ತರುವ ಕಪ್ಪತ್ತಗುಡ್ಡವನ್ನು ಸಂರಕ್ಷಿಸಲು ಹಾಗೂ ಪರಿಸರದ ಮೇಲೆ ಆಗುತ್ತಿರುವ ಅನ್ಯಾಯದ ಬಗ್ಗೆ ಅವಿರತವಾಗಿ ಹೋರಾಟ ನಡೆಸಿದ್ದರು. ಹೀಗೆ ಹತ್ತು–ಹಲವಾರು ಚಳುವಳಿಗಳಲ್ಲಿ ಅವರು ನಡೆಸಿದ ಹೋರಾಟ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವರ ನಿಧನದಿಂದಾಗಿ ರಾಜ್ಯವು ಧರ್ಮ ಮೀರಿ ನಿಂತ ಸಂತ, ಜನಸಾಮಾನ್ಯರ ನಡುವಿನ 'ಬಸವಣ್ಣ' ರವರನ್ನು ಕಳೆದುಕೊಂಡು ಬಡವಾಗಿದೆ.

## 13. ಡಾ: ಸುಮತೀಂದ್ರ ನಾಡಿಗ

ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಕವಿ, ಲೇಖಕ, ವಿಮರ್ಶಕ ಡಾ:ಸುಮತೀಂದ್ರ ನಾಡಿಗ ರವರು, ದಿನಾಂಕ: 07/08/2018 ರಂದು ನಿಧನ ಹೊಂದಿರುತ್ತಾರೆ.

4ನೇ ಮೇ, 1935ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಜನಿಸಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಿಂದ ಮತ್ತು ಅಮೆರಿಕದ ಫಿಲೆಡೆಲ್ಫಿಯಾ ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಎಂ.ಎ., ಪದವಿಯನ್ನು ಹಾಗೂ 1985ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಇವರು ಅಧ್ಯಾಪಕ ವೃತ್ತಿಯ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ನಿರಂತರ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಕಾವ್ಯ, ಕಥನ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ ಇತ್ಯಾದಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುತ್ತಾರೆ.

ಬಹುಭಾಷಾ ಪಂಡಿತರಾಗಿದ್ದ ಶ್ರೀಯುತರು ಕನ್ನಡ, ಇಂಗ್ಲೀಷ್, ಹಿಂದಿ, ಮರಾಠಿ, ಕೊಂಕಣಿ, ಬಂಗಾಳಿ ಭಾಷೆಗಳಲ್ಲಿ ಅದ್ಭುತವಾದ ನೈಪುಣ್ಯತೆಯನ್ನು ಹೊಂದಿದ್ದರು.

ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಶ್ರೀಯುತರ ಕೊಡುಗೆ ಅಪಾರ, ಅವರ ಡಕ್ಕಣಕ್ಕ–ಡಕ್ಕಣಕ್ಕ, ಧ್ರುವ ಮತ್ತು ಪ್ರಹ್ಲಾದ, ಗೂಬೆಯ ಕಥೆ, ಇನ್ನಿತರ ಕಥೆಗಳು ಸುಪ್ರಸಿದ್ಧವಾಗಿವೆ. ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಅವರಿಗೆ 'ಬಾಲ ಸಾಹಿತ್ಯ ಪುರಸ್ಕಾರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಶ್ರೀಯುತರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ದಿನಕರ ಪ್ರತಿಷ್ಠಾನ ಪ್ರಶಸ್ತಿ, ವಿ.ಎಂ.ಇನಾಂದಾರ್ ಪ್ರಶಸ್ತಿಗಳಲ್ಲದೆ ಎಂ.ವಿ.ಸೀ., ಪ್ರಶಸ್ತಿ ಪುರಸ್ಕೃತರಾಗಿದ್ದರು. 1996–99ರ ಅವಧಿಯಲ್ಲಿ ಹರಿದ್ವಾರದ ಗುರುಕುಲ ಕಾಂಗ್ಡಿ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಶ್ರೀಯುತರ ನಿಧನದಿಂದಾಗಿ ಕನ್ನಡ ಸಾಹಿತ್ಯ ಕ್ಷೇತ್ರವು ಹಿರಿಯ ಸಾಹಿತಿ, ಲೇಖಕ, ವಿಮರ್ಶಕರೊಬ್ಬರನ್ನು ಕಳೆದುಕೊಂಡಂತಾಗಿದೆ.

## 14. ಜ.ಹೋ.ನಾರಾಯಣಸ್ವಾಮಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಸಾಹಿತಿ ಶ್ರೀ ಜ.ಹೋ.ನಾರಾಯಣಸ್ವಾಮಿ ರವರು ದಿನಾಂಕ: 11/08/2018 ರಂದು ನಿಧನ ಹೊಂದಿರುತ್ತಾರೆ.

13ನೇ ಜುಲೈ, 1941ರಲ್ಲಿ ಹಾಸನ ಜಿಲ್ಲೆಯ ಜನಿವಾರ ಗ್ರಾಮದಲ್ಲಿ ಜನಿಸಿದ ಶ್ರೀಯುತರು ಪಿ.ಯು.ಸಿ. ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕಾಗಿ ಬೆಂಗಳೂರಿಗೆ ಬಂದು ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್, ಭಾರತ್ ಅರ್ಥ ಮೂವರ್ಸ್ ಲಿಮಿಟೆಡ್‌ನ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಕಾರ್ಯ ನಿರ್ವಹಿಸಿದ್ದು, ತಮ್ಮ ಕರ್ತವ್ಯ ನಿರ್ವಹಣೆಯ ಮಧ್ಯದಲ್ಲಿಯೇ ಬಿ.ಕಾಂ., ಬಿ.ಎಲ್., ಎಂ.ಎ., ಪದವಿಯನ್ನು ಪಡೆದು ನಾಟಕದಲ್ಲಿ ಡಿಪ್ಲೋಮಾವನ್ನು ಸಹ ಪೂರ್ಣಗೊಳಿಸಿದ್ದರು. ತದನಂತರ ಹಾಸನಕ್ಕೆ ತೆರಳಿದ ಶ್ರೀಯುತರು ವಕೀಲರಾಗಿ ಕಾರ್ಯ ನಿರ್ವಹಿಸಿದ್ದರು, ಅಲ್ಲದೆ ಎರಡು ಬಾರಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಸೇವೆಯನ್ನು ಸಲ್ಲಿಸಿದ್ದರು.

ರಾಷ್ಟ್ರಕವಿ ಕುವೆಂಪುರವರ ಅಭಿಮಾನಿ ಮತ್ತು ಅನುಯಾಯಿಯಾಗಿದ್ದ ಶ್ರೀಯುತರು ಕವನ ಸಂಕಲನ, ನಾಟಕ, ವಿಮರ್ಶೆ, ವೈಚಾರಿಕತೆ, ಜೀವನ ಚರಿತ್ರೆಗಳು ಸೇರಿದಂತೆ ವಿವಿಧ ವಿಭಾಗಗಳಲ್ಲಿ 26ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುತ್ತಾರೆ. ಶ್ರೀಯುತರ 'ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು' ಮತ್ತು ಏಕಲವ್ಯನ ಕಥೆಯನ್ನಾಧರಿಸಿದ 'ಅದಮ್ಯ' ಕಾದಂಬರಿಗಳು ಪ್ರಸಿದ್ಧವಾದವುಗಳು. ಸ್ನೇಹ ಬಳಗದಲ್ಲಿ ಜ.ಹೋ.ನಾ. ಎಂದೇ ಜನಜನಿತರಾಗಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಹಾಸನ ಜಿಲ್ಲೆಯ ಬಿ.ಜಿ.ವಿ.ಎಸ್. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ, ಸಹಕಾರ ಆಂದೋಲನದ ಪ್ರಧಾನ ಕಾರ್ಯದರ್ಶಿಯಾಗಿ, ಹಾಸನ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಜಿಲ್ಲಾ ಬರಹಗಾರರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ಹಾಸನ ಜಿಲ್ಲೆಯಲ್ಲಿ ನಡೆದ 7ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ವೈಜ್ಞಾನಿಕ ಮನೋಧರ್ಮ ಮತ್ತು ತರ್ಕಬದ್ಧವಾದ ಯೋಚನಾ ಲಹರಿಯನ್ನು ಹೊಂದಿದ್ದ ಬಹುಮುಖ ಪ್ರತಿಭೆಯ ಕನ್ನಡದ ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಸವದತ್ತಿಯ ಮಾಜಿ ಶಾಸಕರಾದ ಶ್ರೀ ರಾಜಣ್ಣನವರು ತೀರಿಕೊಂಡಿದ್ದಾರೆ. ಅವರ ಹೆಸರು ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಿರುವುದಿಲ್ಲ.

**ಸಭಾಪತಿಯವರು:–** ಶ್ರೀಯುತರು ಶಾಸಕರಾಗಿದ್ದಾಗ ವಿಧಾನ ಸಭೆಯಲ್ಲಿ ತಂದಿರುವ ಸಂತಾಪ ಸೂಚನೆಯಲ್ಲಿ ತೆಗೆದುಕೊಳ್ಳುತ್ತಾರೆ. ಒಂದು ವೇಳೆ ಎಂ.ಎಲ್.ಎ. ಆಗಿ ಸಚಿವರಾಗಿದ್ದಾಗ ಮಾತ್ರ ಇಲ್ಲಿ ಪ್ರಸ್ತಾಪವಾಗುತ್ತದೆ.

**ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ:–** ಎರಡೂ ಸದನಗಳಲ್ಲಿ ಪ್ರಸ್ತಾಪವಾದರೆ ಒಳ್ಳೆಯದು.

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಭಾರತದ ಮಾಜಿ ಪ್ರಧಾನಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು ದಿನಾಂಕ:16–08–2018ರಂದು ನಿಧನರಾಗಿದ್ದು, ಇವರನ್ನು ಅಜಾತಶತ್ರು ಎನ್ನುವ ಹೆಸರಿನಲ್ಲಿ ನಾವೆಲ್ಲರೂ ಗುರುತಿಸುತ್ತಿದ್ದೆವು. ಬಹುಶಃ ರಾಜಕಾರಣದಲ್ಲಿ ಎಲ್ಲರಿಂದಲೂ ಸೈ ಎನಿಸಿಕೊಂಡು ಎಲ್ಲರಿಗೂ ತೃಪ್ತಿ ತರುವಂತಹ ರೀತಿಯಲ್ಲಿ ಕೆಲಸ ಮಾಡುವುದು ಹಾಗೂ ದೀರ್ಘಕಾಲದ ರಾಜಕಾರಣದಲ್ಲಿ ಪ್ರತಿಯೊಬ್ಬರಿಂದಲೂ ಅಜಾತಶತ್ರು ಎಂಬ ಹೆಸರನ್ನು ತೆಗೆದುಕೊಳ್ಳುವುದು ಭಾರತದಲ್ಲಿ ವಿಶೇಷ ಎಂದು ಹೇಳಬಹುದು. ಭಾರತ ಕಂಡ ಅಪರೂಪದ ಮುತ್ಸದ್ದಿ, ಕವಿ ಹಾಗೂ ಹಿರಿಯ ರಾಜಕಾರಣಿಗಳಾಗಿದ್ದ ಇವರು ಅತ್ಯಂತ ಆಪ್ತತೆಯಿಂದ ವರ್ತಿಸುತ್ತಿದ್ದರು. ಇವರನ್ನು ಬೇರೊಂದು ಪಕ್ಷದಲ್ಲಿದ್ದಾರೆ ಎಂದು ನಾವು ಯಾವತ್ತೂ ನೋಡುತ್ತಿರಲಿಲ್ಲ. ಅವರು ಅಧಿಕಾರದಲ್ಲಿದ್ದಾಗ ಮಾಡಿದಂತಹ ಅಣು ಪರೀಕ್ಷೆ ನಿರ್ಧಾರ ಇರಬಹುದು, ಚತುಷ್ಪಥ ರಸ್ತೆಗಳ ನಿರ್ಮಾಣದಲ್ಲಿ ದೇಶದ ನಾಲ್ಕು ಮೂಲೆಗಳಿಗೂ ಸಂಪರ್ಕ ಕಲ್ಪಿಸುವ ನಿರ್ಧಾರ ಇರಬಹುದು, ಭಾರತ ಮತ್ತು ಪಾಕಿಸ್ತಾನಕ್ಕೆ ಕೊಂಡಿಯಾಗಿ ಲಾಹೋರ್‌ಗೆ ರಸ್ತೆ ಸಂಪಕವನ್ನು ಕಲ್ಪಿಸಿ ಬಸ್ ಸಂಚಾರವನ್ನು ಕೈಗೊಂಡಿರುವ ವಿಚಾರ ಇರಬಹುದು, ಗ್ರಾಮ ಸಡಕ್ ಯೋಜನೆಯನ್ನು ಜಾರಿಗೆ ತಂದಿರುವುದಿರಬಹುದು, ಈ ದೇಶದ ಎಲ್ಲಾ ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆನ್ನುವ ನಿರ್ಧಾರಗಳಲ್ಲಿ ದೇಶಕ್ಕೆ ಕೊಟ್ಟ ಕೊಡುಗೆಗಳನ್ನು ನೆನಪಿಸಿಕೊಳ್ಳಬಹುದು. ಇವುಗಳಲ್ಲಿ ಮೊಟ್ಟಮೊದಲನೆಯದಾಗಿ ಭಾರತ ಮತ್ತು ಪಾಕಿಸ್ತಾನದ ಲಾಹೋರ್‌ಗೆ ಬಸ್ ಸಂಚಾರವನ್ನು ಆರಂಭಿಸುವ ವಿಚಾರದಲ್ಲಿ ಕೈಗೊಂಡ ದೃಢ ನಿಲುವು ಇವತ್ತಿಗೂ ಅಚ್ಚಳಿಯದೇ ನನ್ನ ಕಣ್ಣ ಮುಂದೆ ಇದೆ. ಆ ಸಂದರ್ಭದಲ್ಲಿ ಜನರ ಸಂಭ್ರಮ, ಜನರು ವ್ಯಕ್ತಪಡಿಸಿರುವ ಭಾವನೆಗಳು ಹಾಗೂ ಅವರ ಕಣ್ಣಿನಲ್ಲಿ ಒಬ್ಬರನ್ನೊಬ್ಬರು ನೋಡುತ್ತೇವೆ ಎನ್ನುವ ಆಶಾಭಾವನೆಗಳು, ಆ ವಲಸೆ ಹೋಗಿರುವ ವಿಚಾರಗಳು ಇರಬಹುದು, ಇವೆಲ್ಲವೂ ಬಿಡುಗಡೆಯಾಗಿ ಮತ್ತೊಮ್ಮೆ ಒಬ್ಬರನ್ನೊಬ್ಬರು ನೋಡುವ ಅವಕಾಶ ಒದಗಿಸಿಕೊಟ್ಟವರ ಬಗ್ಗೆ ಅಪಾರ ಅಭಿಮಾನವನ್ನು ನಾವು ಕಂಡಿದ್ದೇವೆ.

ಇನ್ನು ಮಹಿಳೆಯರ ಬಗ್ಗೆ ಅವರಿಗೆ ಇದ್ದ ಅಪಾರ ಗೌರವ. ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನವನ್ನು ಅತ್ಯಂತ ಘನತೆ–ಗಾಂಭೀರ್ಯದಿಂದ ನಿರ್ವಹಿಸಿದ ರೀತಿ ಇರಬಹುದು, ಅದೇರೀತಿ ಮಾಜಿ ಪ್ರಧಾನಿಗಳಾದ ದಿ॥ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಕೊಟ್ಟ ಗೌರವವನ್ನು ನೆನಪಿಸಿಕೊಂಡಾಗ ಅವರ ಮೇಲೆ ಇನ್ನಷ್ಟು ಗೌರವಗಳು ಜಾಸ್ತಿಯಾಗುತ್ತವೆ. ಅವರಿಗೆ ಬಂದ ಪ್ರಶಸ್ತಿಗಳ ಲೆಕ್ಕ ಇಲ್ಲ, ಅವರು ನಮ್ಮ ಭಾರತ ರತ್ನ. ನನಗೆ ಈಗಲೂ ನೆನಪಿರುವಂತೆ ನ್ಯಾಷನಲ್ ಕಾಲೇಜ್ ಗ್ರೌಂಡ್‌ನಲ್ಲಿ ಇಂತಹ ಸಂಸದೀಯ ವಾಕ್ಪಟು ಭಾಷಣ ಮಾಡುವುದಕ್ಕೆ ಬರುತ್ತಾರೆಂದರೆ, ಎಲ್ಲರೂ ಕಾಯುತ್ತಿದ್ದರು. ಅವರು ಎಷ್ಟು ಸೊಗಸಾಗಿ ಮಾತನಾಡುತ್ತಿದ್ದರೆಂದರೆ, ಅವರ ಮಾತುಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕೇಳಲು ರಸ್ತೆಗಳಲ್ಲಿ ಓಡಾಡುವ ಕಾರುಗಳು ಹಾಗೆಯೇ ನಿಲ್ಲುತ್ತಿದ್ದವು. ಬೇರೆ ಬೇರೆ ಪಕ್ಷದವರೂ ಸಹ ಕಾರುಗಳನ್ನು ಪಾರ್ಕ್ ಮಾಡಿ ಅವರ ಮಾತುಗಳನ್ನು ಕೇಳಿದ ನಂತರ ಹೊರಗೆ ಹೋಗುತ್ತಿದ್ದರು ಎನ್ನುವ ವಿಚಾರಗಳನ್ನು ನಾವು ಕೇಳಿದ್ದೇವೆ. ನಾನು ಆ ದಿನಗಳನ್ನೂ ನೆನಪಿಸಿಕೊಂಡಿದ್ದೇನೆ. ಏಕೆಂದರೆ ಅವರ ಮಾತಿನ ಮಾಧುರ್ಯಯುತವಾಗಿದ್ದುದರ ಜೊತೆಗೆ ಅದರಲ್ಲಿ ಅತ್ಯಂತ ಸೊಗಸಾದ ಶಬ್ದಗಳನ್ನು ಜೋಡಣೆ ಮಾಡಿ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರ ದಿಟ್ಟ ವ್ಯಕ್ತಿತ್ವವನ್ನು ಪ್ರತಿನಿಧಿಸುವ, ಅವರೇ ಬರೆದ ಕಾವ್ಯದ ಕನ್ನಡ ಅನುವಾದವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವ ಮುಖಾಂತರ ಅವರಿಗೆ ನಮ್ಮೆಲ್ಲರ ಪ್ರಣಾಮಗಳನ್ನು ತಿಳಿಸಲು ಬಯಸುತ್ತೇನೆ.

*“ಸಂಕಟಗಳು ಬರುತ್ತವೆ, ಬರಲಿ,*
*ಅವು ನಿಲ್ಲುವುದಿಲ್ಲ, ಅವು ಬಾಗುವುದಿಲ್ಲ;*
*ನಾವೇನು ಮುಟ್ಟಿದ ಕೂಡಲೇ ಮುರುಟಿ ಹೋಗಲು*
*ಮುಟ್ಟಿದರೆ ಮುನಿ ಎಂಬ ಗಿಡಗಳಲ್ಲ;*
*ಸಿಡಿಲಿನ ಅಘಾತದಿಂದ ಆಕಾಶದಲ್ಲಿ ಬೆಳಗುವ ನಕ್ಷತ್ರಗಳು ಮುಳುಗುತ್ತವೆಯೇ...?”*

ಎಂದು ಪ್ರಶ್ನಿಸುವ ಮೂಲಕ ಧೈರ್ಯ ಮತ್ತು ಸಾಹಸ ಹಾಗೂ ಬದುಕನ್ನು ಎದುರಿಸುವ ಶಕ್ತಿಯನ್ನು ಯಾವುದೇ ಸಂಕಷ್ಟಗಳು ಬಂದಾಗ ಹೇಗಿರಬೇಕು ಎಂಬುದನ್ನು ಕೇವಲ ನಾಲ್ಕು ಸಾಲುಗಳಲ್ಲಿ ತಿಳಿಸಿದ್ದಾರೆ. ಇದರಿಂದ ಅವರ ಆಲೋಚನೆಗಳು ಹಾಗೂ ಬದುಕನ್ನು ಎದುರಿಸಿದ ರೀತಿಗಳು ನಮಗೆ ಗೋಚರವಾಗುತ್ತವೆ.

ದಿನಾಂಕ:12–11–2018ರಂದು ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ಅನಂತ್‌ಕುಮಾರ್ ರವರು ನಿಧನ ಹೊಂದಿದ್ದು, ಇವರ ಅಕಾಲಿಕ ಮರಣ ಇಡೀ ದೇಶವಲ್ಲದೇ ಕನ್ನಡ ನಾಡಿಗೂ ಭರಿಸಲಾಗದ ನಷ್ಟ ಎಂದು ಹೇಳಬಹುದು. ಅವರು ಕ್ಯಾನ್ಸರ್ ಪೀಡಿತ ರೋಗಿಗಳ ಸಹಾಯಕ್ಕಾಗಿ ದುಡಿದವರಾಗಿದ್ದಾರೆ. ಅಲ್ಲದೆ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್ (Sri Shankara Cancer Hospital And Research Centre) ಎಂಬುದನ್ನು ಸ್ಥಾಪನೆ ಮಾಡಲು ಸಹಕರಿಸಿದವರಾಗಿದ್ದಾರೆ. ಆದರೆ ಬಹಳ ನೋವಿನ ಸಂಗತಿ ಎಂದರೆ, ವಂಶ ಬಳುವಳಿಯಾಗಿ ಬಂದಿರುವ ಕಾಯಿಲೆ ಅವರನ್ನೇ ಪೀಡಿಸಿದಾಗ ನಾವು ಅವರನ್ನು ಕಳೆದುಕೊಳ್ಳುವ ಅನಿವಾರ್ಯ ಸ್ಥಿತಿಗೆ ಬಂದೆವು.

ನನಗೆ ಅವರ ಬಗ್ಗೆ ಅಪಾರ ಗೌರವ ಇದ್ದು, ಅವರು ಕರ್ನಾಟಕ ರಾಜ್ಯ ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಒಂದು ಕೊಂಡಿಯಾಗಿ ಸತತ 30 ವರ್ಷಗಳಿಗೂ ಹೆಚ್ಚಿನ ಕಾಲ ಸೇವೆ ಸಲ್ಲಿಸಿದ್ದಾರೆ.

(ಮುಂದು)

(316)12.50/10.12.2018/ಹೆಚ್‌ವಿ–ಕೆಎಸ್

**ಡಾ:ಜಯಮಾಲ(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಅವರು ರಾಜಕೀಯವಾಗಿ ಬೇರೆ ಪಕ್ಷದಲ್ಲಿದ್ದರೂ ಸಹ ಈ ನಾಡಿಗೆ ಸಮಸ್ಯೆಗಳು ಬಂದಾಗ, ಚುನಾವಣೆಗಾಗಿ ಮಾತ್ರ ನಾವು ಪಕ್ಷವನ್ನು ಮೀಸಲಾಗಿಡೋಣ, ನಾಡಿನ ಅಭಿವೃದ್ಧಿ ಕಾರ್ಯದಲ್ಲಿ ನಾವೆಲ್ಲರೂ ಒಂದೇ ಎನ್ನುವ ನಿಟ್ಟಿನಲ್ಲಿ ಅವರೊಂದಿಗೆ ನಾವೆಲ್ಲರೂ ಕಾರ್ಯ ನಿರ್ವಹಿಸುತ್ತಿದ್ದೆವು. ಅದೇ ರೀತಿಯಲ್ಲಿ ಕಾವೇರಿ ನದಿ ಜಲ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವಿವಾದವುಂಟಾದಾಗ, ಮಾನ್ಯ ಅನಂತ್‌ಕುಮಾರ್‌ರವರು ಲೋಕಸಭೆಯಲ್ಲಿ ಗಟ್ಟಿಯಾಗಿ ನಿಂತು ಧ್ವನಿ ಎತ್ತಿರುವುದನ್ನು ನಾವು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದೆಲ್ಲದಕ್ಕಿಂತ ಹೆಚ್ಚಾಗಿ ವಿಶ್ವಸಂಸ್ಥೆ ಸಭೆಯಲ್ಲಿ ಮೊದಲ ಬಾರಿಗೆ ಕನ್ನಡ ಭಾಷೆಯಲ್ಲಿ ಮಾತನಾಡುವ ಮೂಲಕ ಕನ್ನಡ ಭಾಷೆಯ ಅಭಿಮಾನವನ್ನು ಮೆರೆಸಿದ್ದಾರೆ. ನನಗೆ ಅವರ ಬಗ್ಗೆ ಅಪಾರವಾಗಿರುವ ಅಭಿಮಾನವಿದೆ.

ಸನ್ಮಾನ್ಯ ಸಭಾಪತಿಯವರೇ, ಶಾಲೆಗಳಲ್ಲಿ ಕಲಿಯುತ್ತಿರುವ ಬಡ ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವಂತಹ ಕಾರ್ಯಕ್ರಮವನ್ನು ಅವರು 'ಅದಮ್ಯ ಚೇತನ' ಸಂಸ್ಥೆಯ ಮೂಲಕ ಹಮ್ಮಿಕೊಂಡಿದ್ದಾರೆ. ಇದನ್ನು ನೋಡಿದರೆ, ಒಬ್ಬ ವ್ಯಕ್ತಿಯ ಬದುಕಿನ ಸಾರವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರು ಯಾರಿಗಾಗಿ ದುಡಿಯುತ್ತಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ ಎನ್ನುವ ಮಾತು ಸ್ಪಷ್ಟವಾಗುತ್ತದೆ. 'ಅದಮ್ಯ ಚೇತನ' ಸಂಸ್ಥೆಯ ಮೂಲಕ ಬಡ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಪೂರೈಕೆ ಮಾಡುವಂತಹ ಕೆಲಸವನ್ನು ಮಾನ್ಯ ಅನಂತ್‌ಕುಮಾರ್‌ರವರ ಧರ್ಮಪತ್ನಿಯವರು ನಿರ್ವಹಿಸುತ್ತಿದ್ದಾರೆ. ಅವರು ಈ ಕೆಲಸವನ್ನು ಮುಂದುವರೆಸಿದರೆ ನಿಜಕ್ಕೂ ಅವರ ಆತ್ಮಕ್ಕೆ ತೃಪ್ತಿಯುಂಟಾಗುತ್ತದೆ. ಈ ಸದನದಲ್ಲಿರುವ ಎಲ್ಲ ಸದಸ್ಯರ ಸಾಂತ್ವನವನ್ನು ಅವರ ಕುಟುಂಬದವರಿಗೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ಭಗವಂತ ಅವರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಎಂದು ಈ ಸದನದ ಮೂಲಕ ಭಗವಂತನಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸೋಮನಾಥ ಚಟರ್ಜಿಯವರು ಕಮ್ಯೂನಿಸ್ಟ್ ಪಕ್ಷದವರಾಗಿ, ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಹೊಂದಿದ್ದರೂ ಸಹ, ಸದನದಲ್ಲಿ ಯಾವುದೇ ಚರ್ಚೆಗಳು ನಡೆದರೂ ಎಲ್ಲ ಪಕ್ಷಗಳಿಗೂ ಸಹನೆ ಮತ್ತು ಸಮತೋಲನವಾದ ಅವಕಾಶಗಳನ್ನು ನೀಡಿ, ಅವರೆಲ್ಲರೊಂದಿಗೆ ನಿಷ್ಪಕ್ಷಪಾತವಾಗಿ ವರ್ತಿಸುತ್ತಿದ್ದರು. ಆ ಮೂಲಕ ಅತ್ಯುತ್ತಮ ಲೋಕಸಭಾಧ್ಯಕ್ಷರಾಗಿ ಅವರು ಕಾರ್ಯವನ್ನು ನಿರ್ವಹಿಸಿದ್ದಾರೆ. ಗಾಂಭೀರ್ಯಕ್ಕೆ ಹೆಸರಾಗಿದ್ದ ಮಾನ್ಯ ಸೋಮನಾಥ ಚಟರ್ಜಿಯವರ ನಿಧನದಿಂದಾಗಿ ನಾವು ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ಮತ್ತು ಒಬ್ಬ ಶ್ರೇಷ್ಠ ಸಭಾಧ್ಯಕ್ಷರನ್ನು ಕಳೆದುಕೊಂಡಿದ್ದೇವೆ.

ಮಾನ್ಯ ಸಭಾಪತಿಯವರೇ, ಹಿರಿಯ ತಲೆಮಾರಿನ ಮತ್ತು ಇಂದಿನ ಯುವ ಕಾಂಗ್ರೆಸ್ ಸಮುದಾಯದ ನಡುವೆ ಕೊಂಡಿಯ ರೂಪದಲ್ಲಿದ್ದವರು ಮಾನ್ಯ ಸಿ.ಕೆ.ಜಾಫರ್ ಷರೀಫ್‌ರವರು. ಅವರು ಕಾಂಗ್ರೆಸ್ ಪಕ್ಷದ ಶಕ್ತಿಯಾಗಿ ಬೆಳೆದಿದ್ದರು. ಅವರ ನಿಧನದಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಕಷ್ಟಪಟ್ಟರೆ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಬಂದು ಪಕ್ಷದಲ್ಲಿ ಎಷ್ಟು ದೊಡ್ಡ ಮಟ್ಟಕ್ಕೆ ಬೆಳೆಯಬಹುದು ಎನ್ನುವುದನ್ನು ಮಾನ್ಯ ಜಾಫರ್ ಷರೀಫ್‌ರವರು ತೋರಿಸಿಕೊಟ್ಟಿದ್ದಾರೆ. ಸುಮಾರು 7 ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದ ಅವರು ಅತ್ಯಂತ ಶ್ರೇಷ್ಠ ನಾಯಕರು. 'ಜಾಫರ್ ಷರೀಫ್' ಎಂದ ಕೂಡಲೇ ನೆನಪಿಗೆ ಬರುವುದು ರೈಲ್ವೆ ಸಚಿವಾಲಯ. ಕೇಂದ್ರದಲ್ಲಿ ಮಾನ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಿ.ವಿ.ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದ ಕಾಲದಲ್ಲಿ, ಅವರ ಸಚಿವ ಸಂಪುಟದಲ್ಲಿ ರೈಲ್ವೆಮಂತ್ರಿಗಳಾಗಿ ಕಾರ್ಯನಿರ್ವಹಿಸಿರುವುದನ್ನು ಜನರು ಇವತ್ತಿಗೂ ಸ್ಮರಿಸುತ್ತಾರೆ. ಹೊಸ ರೈಲ್ವೆ ಮಾರ್ಗಗಳ ನಿರ್ಮಾಣದ ಜೊತೆಗೆ, ರೈಲ್ವೆ ಸಂಪರ್ಕದಲ್ಲಿ ಹೊಸ ತಂತ್ರಜ್ಞಾನದ ಬಳಕೆ. ಬಳಕೆಯಲ್ಲಿರುವ ಗೇಜ್‌ಗಳ ಪರಿವರ್ತನೆ ಮತ್ತು ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತೆ ರೈಲ್ವೆ ಸಂಪರ್ಕಗಳನ್ನು ಏರ್ಪಡಿಸುವುದರ ಜೊತೆಗೆ ಹಲವಾರು ಹೊಸ ರೀತಿಯ ಸುಧಾರಣೆಗಳನ್ನು ಮೊದಲ ಬಾರಿಗೆ ರೈಲ್ವೆ ವಲಯದಲ್ಲಿ ತಂದಿದ್ದಾರೆ. ಇವತ್ತಿಗೂ ಸಹ ಮಾನ್ಯ ಜಾಫರ್ ಷರೀಫ್‌ರವರ ಹೆಸರನ್ನು ಹೇಳಿದರೆ ಅನೇಕರು ಕೈ ಮುಗಿದು, 'ಪುಣ್ಯಾತ್ಮ ಚೆನ್ನಾಗಿರಲಿ ನಮಗೆ ಕೆಲಸವನ್ನು ಕೊಟ್ಟಿದ್ದಾರೆ. " ರೈಲ್ವೆಯಲ್ಲಿ ಹೊಸ ಅವಿಷ್ಕಾರಗಳನ್ನು ತರುವುದರಲ್ಲಿ ಸಹಕರಿಸಿದವರು' ಎಂದು ಹೇಳುತ್ತಾರೆ. ಮತ್ತೊಂದು ಪ್ರಮುಖವಾಗಿರುವ ವಿಚಾರವೇನೆಂದರೆ, ಅವರು ಕಾಂಗ್ರೆಸ್ ಪಕ್ಷವನ್ನು ತಾಯಿಯಂತೆ ಪ್ರೀತಿಸಿ, ಪಕ್ಷ ನಿಷ್ಠೆಯನ್ನು ತೋರಿಸಿದವರು ಎನ್ನುವ ಅಂಶವನ್ನು ಈ ಸಂದರ್ಭದಲ್ಲಿ ನಾವು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರ ನಿಧನ ನಮಗೆ ಅತ್ಯಂತ ನೋವನ್ನುಂಟು ಮಾಡಿದೆ.

ಸನ್ಮಾನ್ಯ ಸಭಾಪತಿಯವರೇ, ಬರಿಯ ಅಂಬರೀಷ್ ಆಗಿದ್ದವರು ಡಾ:ಅಂಬರೀಷ್ ಆದರು. ಅಂಬರೀಷ್‌ರವರನ್ನು ನಾನು 1975ನೇ ಇಸವಿಯಿಂದ ನೋಡಿದ್ದೇನೆ. ಇಷ್ಟು ಸುದೀರ್ಘವಾದ ಯಾತ್ರೆಯಲ್ಲಿ ನಾನು ಮತ್ತು ಅವರು ಒಟ್ಟಿಗೆ ಚಿತ್ರರಂಗಕ್ಕೆ ಮತ್ತು ರಾಜಕೀಯ ರಂಗಕ್ಕೆ ಬಂದೆವು. ಅಂಬರೀಷ್‌ರವರು ಬೆಳೆದ ಗ್ರಾಫ್ ಮತ್ತು ಅವರಿಗೆ ಸಿಕ್ಕಂತಹ ಅವಕಾಶಗಳನ್ನು ಒಮ್ಮೆ ಮೆಲುಕು ಹಾಕಿದರೆ ಅಚ್ಚರಿಯುಂಟಾಗುತ್ತದೆ. ಒಬ್ಬ ಮನುಷ್ಯನ ಬೆಲೆ ಬದುಕಿರುವಾಗ ಗೊತ್ತಾಗುವುದಿಲ್ಲ, ಸತ್ತಾಗ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ಅಂಬರೀಷ್‌ರವರನ್ನು ನಾವೆಲ್ಲರೂ ಕಳೆದುಕೊಂಡಾಗ ಕೋಟ್ಯಂತರ ಮತ್ತು ಲಕ್ಷಾಂತರ ಜನರ ಹೃದಯದಲ್ಲಿ ಅವರು ಉಳಿದುಕೊಂಡಿರುವುದನ್ನು ಮತ್ತು ಅವರ ಜನಪ್ರಿಯತೆಯನ್ನು ನಾವೆಲ್ಲರೂ ನೋಡಿದ್ದೇವೆ.

ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಅಂಬರೀಷ್‌ರವರನ್ನು "ಕಲಿಯುಗ ಕರ್ಣ" ಎಂದು ಕರೆಯುತ್ತಾರೆ. ಇದು ಅವರು ನಟಿಸಿರುವ ಚಿತ್ರದ ಹೆಸರು ಎಂದು ನಾನು ಹೇಳುವುದಿಲ್ಲ. ಅವರು ಬೇರೆ ರೀತಿಯಲ್ಲಿ ಕರ್ಣನಾಗಿರುವುದನ್ನು ನಾನು ನೋಡಿದ್ದೇನೆ. ಒಬ್ಬ ನಿರ್ಮಾಪಕ ತನ್ನ ಮನೆ–ಮಠ ಮತ್ತು ತನ್ನ ಹೆಂಡತಿಯ ಒಡವೆಯನ್ನು ಸಹ ಅಡವಿಟ್ಟು ಒಂದು ಸಿನಿಮಾ ಮಾಡಿರುತ್ತಾನೆ, ಆ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೋತರೆ, ಆ ನಿರ್ಮಾಪಕ ಸುಮಾರು ಹತ್ತು ವರ್ಷಗಳ ಕಾಲ ತಲೆ ಎತ್ತುವುದಕ್ಕೆ ಸಾಧ್ಯವಾಗುವುದಿಲ್ಲ. ಆತನ ಬದುಕು ನಿಂತ ನೀರಿನಂತಾಗುತ್ತದೆ. ಇಂತಹ ಪ್ರಸಂಗ ನಡೆದಂತಹ ಸಂದರ್ಭದಲ್ಲಿ ಅಂಬರೀಷ್‌ರವರು ನಿರ್ಮಾಪಕನ ಒಂದು ಸಿನಿಮಾ ಸೋತಾಗ ತಕ್ಷಣ ಆತನಿಗೆ ಮತ್ತೊಂದು ಕಾಲ್‌ಶೀಟ್ ನೀಡುತ್ತಿದ್ದರು. ಇದರ ಜೊತೆಗೆ ಆ ಸಿನಿಮಾ ನಿರ್ದೇಶನ ಮಾಡುವುದಕ್ಕೆ ಬೇಕಾದಂತಹ ನಿರ್ದೇಶಕನನ್ನು, ಸಹ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಲಾವಿದರನ್ನು ಮತ್ತು ಇನ್ನಿತರರನ್ನು ಈ ಸಿನಿಮಾ ಮುಗಿಯುವವರೆಗೆ ಯಾರೂ ಸಂಭಾವನೆ ಕೇಳಬೇಡಿ ಎಂದು ಒಪ್ಪಿಸಿ, ಕಡಿಮೆ ಬಜೆಟ್‌ನಲ್ಲಿ ಮೂರು ತಿಂಗಳ ಕಾಲಾವಧಿಯೊಳಗೆ ಒಂದು ಒಳ್ಳೆಯ ಸಿನಿಮಾ ಮಾಡಿರುವುದನ್ನು ನಾನು ನೋಡಿದ್ದೇನೆ. ಆ ಸಿನಿಮಾದಿಂದ ನಿರ್ಮಾಪಕನಿಗೆ ಹಣ ಬಂತು ಎಂದು ಗೊತ್ತಾದ ಮೇಲೆ ಅಂಬರೀಶ್ ಬೇರೊಂದು ಸಿನಿಮಾದ ಕಡೆಗೆ ಗಮನ ಹರಿಸುತ್ತಿದ್ದರು. ಇದು ಅಂಬರೀಶ್‌ರವರ ವ್ಯಕ್ತಿತ್ವ. ಈ ರೀತಿ ಒಬ್ಬ ನಿರ್ಮಾಪಕನಿಗೆ ಅಲ್ಲ, ಅನೇಕ ಜನ ನಿರ್ಮಾಪಕರಿಗೆ ಅವರು ಸಹಾಯ ಮಾಡಿರುವುದನ್ನು ನಾನು ನೋಡಿದ್ದೇನೆ. ಅಂಬರೀಷ್ ಅವರನ್ನು ಹಾಕಿಕೊಂಡು ಸಿನಿಮಾ ಮಾಡಿದರೆ, ನಷ್ಟ ಇಲ್ಲ ಎನ್ನುವ ಮಾತನ್ನು ಪ್ರತಿಯೊಬ್ಬ ನಿರ್ಮಾಪಕ ಹೇಳುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ, ಅನುಭವಿಸಿದ್ದೇನೆ ಮತ್ತು ಆ ರೀತಿಯ ಸಿನಿಮಾಗಳಲ್ಲಿ ಜೊತೆಜೊತೆಯಾಗಿ ನಟಿಸಿದ್ದೇವೆ. ಈ ರೀತಿಯ ಅವರ ಕಳಕಳಿ 'ಕಲಿಯುಗ ಕರ್ಣ' ಎನ್ನುವ ಅನ್ವರ್ಥನಾಮಕ್ಕೆ ಕಾರಣವಾಗಿದೆ. ಶೂಟಿಂಗ್ ಸಮಯದಲ್ಲಿ ಲೈಟ್ ಬಾಯ್ಸ್ ಮೇಲಿಂದ ಬಿದ್ದರೆ ಅಥವಾ ಏನಾದರೂ ಅಪಘಾತಗಳು ಸಂಭವಿಸಿದರೆ ಅವರ ಕುಟುಂಬ ಆರ್ಥಿಕವಾಗಿ ನಲುಗದೇ ಇರುವಂತೆ ಅವರು ಸಹಾಯ ಮಾಡುತ್ತಿದ್ದರು. ಈ ಕೈಯಿಂದ ಕೊಟ್ಟಿರುವುದು ಆ ಕೈಗೆ ಗೊತ್ತಾಗದೇ ಇರುವಂತಹ ರೀತಿಯಲ್ಲಿ ಅವರು ಸಹಾಯ ಮಾಡುತ್ತಿದ್ದರು. ಅಂತಹ ಒಳ್ಳೆಯ ಗುಣವನ್ನು ಅಂಬರೀಷ್‌ರವರು ಹೊಂದಿದ್ದರು.

ಸನ್ಮಾನ್ಯ ಸಭಾಪತಿಯವರೇ, ಕಲಾವಿದರ ಸಂಘಕ್ಕೆ ಒಂದು ಸ್ವಂತ ಕಟ್ಟಡ ನಿರ್ಮಾಣವಾಗಬೇಕೆನ್ನುವುದು ಡಾ: ರಾಜ್‌ಕುಮಾರ್‌ರವರ ಕನಸಾಗಿತ್ತು. ಕಲಾವಿದರ ಸಂಘದ ಸಭೆಗಳನ್ನು ಯಾರಯಾರದೋ ಮನೆಗಳಲ್ಲಿ ನಡೆಸುವಂತಹ ಸನ್ನಿವೇಶವಿರುವುದರಿಂದ ಇದಕ್ಕೆ ಒಂದು ಸ್ವಂತ ಕಟ್ಟಡ ಇಲ್ಲದಿದ್ದರೆ ಹೇಗೆ? ನಾವೆಲ್ಲರೂ ಹೋಗಿಬಿಟ್ಟರೆ, ಮುಂದಿನವರು ಏನು ಮಾಡುತ್ತಾರೋ ಎಂದು ಡಾ:ರಾಜ್‌ಕುಮಾರ್‌ರವರು ಯಾವಾಗಲೂ ಹೇಳುತ್ತಿದ್ದರು. ಡಾ:ರಾಜ್‌ಕುಮಾರ್‌ರವರು ಕಾಲವಾದ ಬಳಿಕ ಆ ಸ್ಥಾನವನ್ನು ಅಂಬರೀಷ್‌ರವರು ತುಂಬಿದ್ದರು. ಕಲಾವಿದರ ಸಂಘದ ಕಟ್ಟಡ ನಿರ್ಮಾಣಕ್ಕಾಗಿ ಅವರು ಹಗಲು–ರಾತ್ರಿ ಶ್ರಮಿಸಿರುವುದನ್ನು ನಾವು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಬಹಳಷ್ಟು ಕಾಳಜಿ ವಹಿಸಿ ಅಂಬರೀಷ್‌ರವರು ಕಲಾ ಸ್ಮಾರಕವನ್ನು ನಿರ್ಮಾಣ ಮಾಡಿದ್ದಾರೆ. ಅದು ಅತ್ಯಂತ ಅದ್ಭುತವಾಗಿರುವ ಸ್ಥಳವಾಗಿದೆ. ಆದರೆ, ನೋವಿನ ಸಂಗತಿ ಏನೆಂದರೆ, ಕಲಾವಿದರ ಸಂಘದ ಕಟ್ಟಡ ನಿರ್ಮಾಣಕ್ಕಾಗಿ ಸಾಕಷ್ಟು ದುಡಿದಂತಹ ಅಂಬರೀಷ್‌ರವರು ಈಗ ನಮ್ಮೊಂದಿಗೆ ಇಲ್ಲ. ಅವರ ಆಶಯಗಳು ಉತ್ತಮವಾಗಿದ್ದವು. ಯಾವುದೇ ಸಮಸ್ಯೆಗಳು ಎದುರಾದರೂ ಯಶಸ್ವಿ ಸಂಧಾನಕಾರರಾಗಿ ಅವರು ಕೆಲಸ ಮಾಡಿರುವುದನ್ನು ನಾವು ನೋಡಿದ್ದೇವೆ. ಚಿತ್ರೋದ್ಯಮಕ್ಕೆ ಯಾವುದಾದರು ಬರಸಿಡಿಲಿನಂತಹ ಸಮಸ್ಯೆ ಬಂದಾಗ ಅದನ್ನು ಚಿಟಿಕೆ ಹಾರಿಸುವುದರಲ್ಲಿ ಪರಿಹರಿಸುವಂತಹ ನಿಪುಣತೆ ಅವರಲ್ಲಿತ್ತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ಚುನಾವಣೆಯಲ್ಲಿ ಅಂಬರೀಷ್‌ರವರು ಮಂಡ್ಯ ಜಿಲ್ಲೆಯಿಂದ ಸ್ಪರ್ಧಿಸಿದಾಗ, ಅವರ ಪರವಾಗಿ ಮತಯಾಚನೆ ಮಾಡುವುದಕ್ಕೆ ನಾನು ಹೋಗಿದ್ದೆ.

(ಮುಂದುವರಿದಿದೆ)

(317) 10.12.2018 1.00 ಪಿಕೆ : ಜಿಆರ್

ಡಾ॥ ಜಯಮಾಲಾ ರಾಮಚಂದ್ರ (ಮುಂದುವರೆದಿದೆ)

ನಾನು ಪ್ರಚಾರಕ್ಕೆಂದು ಮಂಡ್ಯ ಜಿಲ್ಲೆಗೆ ಹೋಗಿದ್ದಾಗ ಮಾನ್ಯ ಅಂಬರೀಷ್‌ರವರಿಗೆ ಹುಷಾರಿರಲಿಲ್ಲ, ಬಹಳ ಕೆಮ್ಮು ಇತ್ತು. ಅವರು ಭಾಷಣ ಮಾಡಲು ಮನೆಯಿಂದ ಹೊರಗೆ ಕೆಮ್ಮುತ್ತಾ ಬರುವುದನ್ನು ನೋಡುತ್ತಿದ್ದ ಜನ, ನೀವು ಕೆಮ್ಮುತ್ತಿದ್ದೀರಿ; ಒಳಗೆ ಹೋಗಿ, ನಾವು ಓಟು ಹಾಕುತ್ತೇವೆ ಎಂದು ಪ್ರತಿಕ್ರಯಿಸುತ್ತಿದ್ದರು. ವಯಸ್ಸಾದ ವೃದ್ಧರಿರಬಹುದು, ಮಹಿಳೆಯರಿರಬಹುದು ಅಥವಾ ಮಕ್ಕಳಿರಬಹುದು ಅವರೂ ಸಹ ಇದೇ ರೀತಿಯಲ್ಲಿ ಪ್ರತಿಕ್ರಯಿಸುತ್ತಿದ್ದರು. ಅವರ ಮರಣದ ನಂತರ ಅವರನ್ನು ನೋಡಲು ಬಂದ ಜನಸಾಗರವನ್ನು ಗಮನಿಸಿದಾಗ ಜನ ಅವರನ್ನು ಹೇಗೆ ಪ್ರೀತಿಸುತ್ತಿದ್ದರು ಎನ್ನುವುದು ಗೊತ್ತಾಗುತ್ತದೆ. ಪ್ರೀತಿ ಎನ್ನುವುದು ಗೋಡೆಗೆ ಚೆಂಡನ್ನು ಎಸೆದ ಹಾಗೆ ಇರುತ್ತದೆ. ಇಂತಹ ಚೆಂಡನ್ನು ಗೋಡೆಗೆ ಎಸೆಯದೇ ಇದ್ದರೆ ಅದು ಬೌನ್ಸ್ ಆಗಿ ಬರುವುದಕ್ಕೆ ಸಾಧ್ಯವೇ ಇಲ್ಲ. ಆ ರೀತಿ ಬೌನ್ಸ್ ಮಾಡುವುದಕ್ಕೆ ಅವಕಾಶ ಕೊಟ್ಟವರು ಮಾನ್ಯ ಅಂಬರೀಷ್‌ರವರು ಎಂದು ಹೇಳಬೇಕಾಗುತ್ತದೆ. ರಾಜಕಾರಣದಲ್ಲಿರಲಿ ಅಥವಾ ಹೊರಗೆ ಇರಲಿ, ಆನೆ ಹೋಗಿದ್ದೇ ದಾರಿ ಆಗುತ್ತದೆ ಎನ್ನುವ ಹಾಗೆ ತಮ್ಮ ದಾರಿಯಲ್ಲಿ ಸಾಗುತ್ತಲೇ ಹೋದರು. ಯಾವುದನ್ನೂ ಕೂಡ ಬಯಸಲಿಲ್ಲ; ಬಂದಾಗ ಬಿಡಲಿಲ್ಲ. ನನಗೆ ಗೊತ್ತಿರುವ ಹಾಗೆ ಶ್ರೀಮತಿ ಸುಮಲತಾರವರು ಒಂದು ದಿವಸವೂ ಕಣ್ಣಲ್ಲಿ ನೀರು ಹಾಕಿಲ್ಲ; ಅವರು ಕಣ್ಣೀರು ಹಾಕಿದ್ದನ್ನು ನಾನು ನೋಡಿಯೇ ಇಲ್ಲ. ಮಾನ್ಯ ಅಂಬರೀಷ್‌ರವರನ್ನು ಪ್ರೀತಿ ಮಾಡಿ ಮದುವೆಯಾದ ಶ್ರೀಮತಿ ಸುಮಲತಾರವರು ಅಂಬರೀಷ್ ಅವರು ಸತ್ತಂಥ ಸಂದರ್ಭದಲ್ಲಿ ಅತ್ತಾಗ ನಮಗೆಲ್ಲಾ ಅತ್ಯಂತ ನೋವಾಯಿತು. ಬೇರೆ ಪರ್ಯಾಯ ಇರದೇ ಇರುವಂತಹ ಇಂತಹ ಮಾನ್ಯ ಅಂಬರೀಷ್‌ರವರನ್ನು ಮತ್ತು ಅನೇಕ ಶ್ರೇಷ್ಠ ವ್ಯಕ್ತಿಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ.

ಮಾನ್ಯ ಸಭಾಪತಿಗಳೆ, ಮಾನ್ಯ ಮೀರ್ ಅಜೀಜ್ ಅಹಮದ್‌ರವರು ಒಬ್ಬ ಸರಳ, ಸಜ್ಜನ ರಾಜಕಾರಣಿಯಾಗಿದ್ದರು. ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ವಕ್ಫ್ ಬೋರ್ಡ್‌ನ ಮತ್ತು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀಯುತರ ನಿಧನದಿಂದ ಒಬ್ಬ ಸರಳ, ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಂತಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ಓಂಪ್ರಕಾಶ್ ಕಣಗಲಿಯವರು ಕಾಂಗ್ರೆಸ್ ಪಕ್ಷದ ಒಬ್ಬ ನಾಯಕರಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದರು. ಮಾನ್ಯ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿ ಬೃಹತ್ ನೀರಾವರಿ ರಾಜ್ಯ ಸಚಿವರಾಗಿ ಮತ್ತು ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ ಇವರು ಅತ್ಯಂತ ಸರಳ ವ್ಯಕ್ತಿಗಳಾಗಿದ್ದರು. ಇಂಥವರನ್ನು ಕೂಡ ನಾವು ಕಳೆದುಕೊಂಡಿದ್ದೇವೆ.

ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಮಾನ್ಯ ತಿಪ್ಪೇಸ್ವಾಮಿಯವರನ್ನು ನಾವು ಕಳೆದುಕೊಂಡಿದ್ದೇವೆ. ನಾಲ್ಕು ದಶಕಗಳ ಕಾಲ ರಾಜಕೀಯ ಹೋರಾಟ ನಡೆಸಿದಂತಹ ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ.

ಮಾನ್ಯ ಈ.ಟಿ.ಶಂಭುನಾಥ್‌ರವರು ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರೂ ಆಗಿದ್ದರು. ಶೈಕ್ಷಣಿಕ ಸಂಸ್ಥೆಗಳ ಹಾಗೂ ಹಿಂದುಳಿದ ಸಂಘಗಳ ನಿರ್ದೇಶಕರಾಗಿ, ಕೃಷಿ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದವರೂ ಆಗಿದ್ದರು. ಅರಣ್ಯ ಖಾತೆಯ ರಾಜ್ಯ ಸಚಿವರಾಗಿ ಸೇವೆಯನ್ನು ಮಾಡಿದ್ದರು. ಇಂಥವರನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಹಾವೇರಿ ಜಿಲ್ಲೆಯ ಕಾಗಿನೆಲೆ ಕನಕ ಗುರುಪೀಠ ಸ್ಥಾಪನೆಗೂ ಸನ್ಮಾನ್ಯರು ಶ್ರಮಿಸಿದ್ದರು.

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್‌ರವರು ದಿ॥ ಜೆ.ಹೆಚ್.ಪಟೇಲ್‌ರವರ ಸಚಿವ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡಿದ್ದಂತಹ ಸನ್ಮಾನ್ಯರ ಸೇವೆಯನ್ನು ಈ ಸದನ ಮರೆಯುವ ಹಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಎಂ.ಕರುಣಾನಿಧಿ ಅವರನ್ನು ನಾನು ಮುಖ್ಯವಾಗಿ ಮೂರು ಕಾರಣಗಳಿಗೋಸ್ಕರ ನೆನೆಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದು ಕಾವೇರಿ ವಿವಾದದ ವಿಚಾರ. ಎರಡನೆಯದು, ಡಾ:ರಾಜ್‌ಕುಮಾರ್‌ರವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ ಸಂದರ್ಭದಲ್ಲಿ ಅವರು ನೀಡಿದ್ದ ಸಹಕಾರ ಮತ್ತು ಕರ್ನಾಟಕದಲ್ಲಿ ತಿರುವಳ್ಳುವರ್ ಅವರ ಪ್ರತಿಮೆ ಸ್ಥಾಪನೆ ಹಾಗೂ ತಮಿಳುನಾಡಿನಲ್ಲಿ ಸರ್ವಜ್ಞನ ಪ್ರತಿಮೆಯ ಸ್ಥಾಪನೆಯ ಸಂದರ್ಭದಲ್ಲಿ ಅವರು ನೀಡಿದ ಸಹಕಾರ. ಕಾವೇರಿ ವಿವಾದ ತಾರಕಕ್ಕೇರಿದಾಗಲೆಲ್ಲಾ ಅವರು ಮಾತು–ಕತೆ, ಸಭೆ, ಸಂಧಾನಗಳೇ ಈ ಸಮಸ್ಯೆಗೆ ಪರಿಹಾರ ಎಂಬ ಮೃದು ಧೋರಣೆ ತಾಳುತ್ತಿದ್ದುದನ್ನು ನಾವು ನೋಡಿದ್ದೇವೆ.

ಡಾ:ರಾಜ್‌ಕುಮಾರ್‌ರವರು ವೀರಪ್ಪನ್‌ನಿಂದ ಅಪಹರಣಕ್ಕೆ ಒಳಗಾದಾಗ ವಾಣಿಜ್ಯ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಾನು ಮಾನ್ಯ ಕರುಣಾನಿಧಿಯವರನ್ನು ಕಾಣುವುದಕ್ಕೆ ಹೋಗಿದ್ದೆ. ಅವರು ಸದರಿ ಪ್ರಕರಣದ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸಮಸ್ಯೆಯ ಪರಿಹಾರಕ್ಕೆ ಸಂಬಂಧಪಟ್ಟಂತೆ ತಾಳಿದ್ದ ನಿಲುವಿನ ಹಿನ್ನೆಲೆಯಲ್ಲಿ ನಮಗೆ ಗಟ್ಟಿಯಾದ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ನಾನು ಸಂಧಾನಕಾರರನ್ನು ಕಳುಹಿಸುತ್ತೇನೆ, ನೀವು ಯಾರೂ ಚಿಂತೆ ಮಾಡಬೇಡಿ, ನಿಮ್ಮ ರಾಜಕುಮಾರ್ ಬಂದೇ ಬರುತ್ತಾರೆ, ಅವರನ್ನು ಕರ್ನಾಟಕಕ್ಕೆ ಕಳುಹಿಸಿಯೇ ತೀರುತ್ತೇನೆ ಎನ್ನುವ ಮಾತನ್ನು ಹೇಳಿದ್ದರು ಮತ್ತು ಅದೇರೀತಿ ನಡೆದುಕೊಂಡರು. ಸಿನಿಮಾ ಉದ್ಯಮದ ಹಿನ್ನೆಲೆಯಿಂದ ಬಂದಿದ್ದ ಅವರು, ತಮಿಳುನಾಡಿನಲ್ಲೇ ಇದ್ದಂಥ ಸಿನಿಮಾ ರಂಗಕ್ಕೆ ಉತ್ತಮ ಸಹಕಾರವನ್ನು ಕೊಟ್ಟಿದ್ದರು. 5 ಬಾರಿ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದ ಅವರನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ.

ಡಾ: ತೋಂಟದಾರ್ಯ ಸಿದ್ಧಲಿಂಗ ಸ್ವಾಮೀಜಿಯವರು ನಮ್ಮನ್ನು ಅಗಲಿದ್ದಾರೆ. ಅವರ ವಿಚಾರ ಧಾರೆಗಳ ಬಗ್ಗೆ ನನಗೆ ಅತ್ಯಂತ ಗೌರವ ಇದೆ. ಅವರು ತಮ್ಮ ಬದುಕಿನುದ್ದಕ್ಕೂ ಸಮಾನತೆಗಾಗಿ ಹೋರಾಟ ಮಾಡಿದ್ದರು. ಸಮಾಜದಲ್ಲಿ ಜಾತಿ–ಮತ, ಲಿಂಗಗಳೆಂದು ಭೇದ ತೋರಿಸದೇ ಸಮಾನತೆಯ ಮೌಲ್ಯಗಳನ್ನು ಅನುಷ್ಠಾನಗೊಳಿಸಲು ಹೋರಾಟ ನಡೆಸಿದ್ದರು. ಗದುಗಿನ ವಿರಕ್ತ ಪರಂಪರೆಯ ಪೀಠವನ್ನೇರಿದರೂ ಅವರಲ್ಲಿ ತಮ್ಮ ಬಾಲ್ಯದ ನೆನಪುಗಳು ಹಾಗೆಯೇ ಇದ್ದವು. ಉಪನ್ಯಾಸ ಮಾಡುವ ಮೊದಲು ಯಾರೇ ಬಂದರೂ, ಮೊದಲು ಊಟ ಮಾಡಿ ಎಂದು ಹೇಳುತ್ತಿದ್ದುದು ಅವರ ಜೀವನ ಕ್ರಮವನ್ನು ಸೂಚಿಸುತ್ತಿತ್ತು. ನಾವು ಗೋಕಾಕ್ ಚಳುವಳಿ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಅವರು ನಮ್ಮ ಜೊತೆಯಲ್ಲಿಯೇ ಇದ್ದರು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ–ಮಾನ ಕೊಡಿಸುವ ಸಲುವಾಗಿ ಮತ್ತು ಡಾ:ನಂಜುಂಡಪ್ಪನವರ ವರದಿಯನ್ನು ಅನುಷ್ಠಾನ ಮಾಡಬೇಕು ಎಂದು ಹೋರಾಟ ಕೂಡ ಮಾಡಿದ್ದರು. ಬೆಳಗಾವಿ ಗಡಿ ಸಮಸ್ಯೆ ಪರಿಹಾರಕ್ಕಾಗಿ ಮತ್ತು ಉತ್ತರ ಕರ್ನಾಟಕಕ್ಕೆ ಮಳೆ ತರುವ ಕಪ್ಪತ್ತಗುಡ್ಡವನ್ನು ಸಂರಕ್ಷಿಸಲು ಹಾಗೂ ಪರಿಸರದ ಮೇಲೆ ಆಗುತ್ತಿರುವ ಅನ್ಯಾಯದ ಬಗ್ಗೆ ಅವಿರತವಾಗಿ ಹೋರಾಟ ನಡೆಸಿದ್ದರು. ಇವತ್ತು ಇಂತಹ ಮಹಾನ್ ಸ್ವಾಮೀಜಿಗಳನ್ನು ನಾವು ಕಳೆದುಕೊಂಡಿದ್ದೇವೆ.

ಮಾನ್ಯ ಸಭಾಪತಿಗಳೆ, ಡಾ॥ಸುಮತೀಂದ್ರ ನಾಡಿಗರವರ ಬಗ್ಗೆ ಹೇಳುವುದಾದರೆ, ಅವರು ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲಿ ತಮ್ಮ ಕೊಡುಗೆ ಕೊಟ್ಟಿರುವುದನ್ನು ನೋಡುತ್ತೇವೆ. ಕತೆ, ಕಾವ್ಯ, ಅನುವಾದ, ವಿಮರ್ಶೆ ಇತ್ಯಾದಿ ಪ್ರಾಕಾರಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟಿರುವ ಅಪಾರವಾದ ಕೊಡುಗೆಯನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಕನ್ನಡ ನಾಡು–ನುಡಿಯನ್ನು ಮತ್ತಷ್ಟು ಶ್ರೀಮಂತಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಅನೇಕ ಯುವಕರನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಅಪಾರ ಶಿಷ್ಯ ವರ್ಗವನ್ನು ಕಟ್ಟಿಕೊಟ್ಟಿದ್ದಾರೆ. ಸನ್ಮಾನ್ಯರಿಗೆ ಎಲ್ಲಾ ರೀತಿಯ ಪ್ರಶಸ್ತಿಗಳು ಬಂದಿವೆ. ಅಂಥವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇದರಿಂದ ನಮ್ಮ ನಾಡಿಗೆ ಬಹಳ ನಷ್ಟವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಸಾಹಿತಿ ಶ್ರೀ ಜ.ಹೋ.ನಾರಾಯಣಸ್ವಾಮಿಯವರನ್ನು ನಾವು ಕಳೆದುಕೊಂಡಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿ ಬರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದ ಇವರು, ಹೊಸತನ ನೀಡಲು, ಹೊಸ ಸ್ಪರ್ಶ ನೀಡಲು ಶ್ರಮಪಟ್ಟಿದ್ದರು.

(ಮುಂದು...)

(318) 10–12–2018 1.10 ಡಿಎಸ್–ಜಿಆರ್

**ಡಾ:ಜೈಮಾಲ ರಾಮಚಂದ್ರ(ಮುಂದು):–**

ಹೊಸತನ ಮತ್ತು ಹೊಸ ಸ್ಪರ್ಶ ನೀಡುವುದಕ್ಕೆ ಮಾನ್ಯ ನಾರಾಯಣಸ್ವಾಮಿಯವರು ತೀವ್ರವಾಗಿ ಶ್ರಮಿಸಿದ್ದಾರೆ. ಇವರ ನಿಧನದಿಂದ ನಮಗೆ ನಷ್ಟವಾಗಿದೆ ಎಂದು ಹೇಳಬಯಸುತ್ತಾ, ಈ ಎಲ್ಲ ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಇವರುಗಳ ಅಗಲಿಕೆಯ ನೋವನ್ನು ಸಹಿಸುವಂಥ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮ ನೀಡಲಿ ಎಂದು ನಾನು ಎಲ್ಲಾ ಸದಸ್ಯರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, 14 ಮಂದಿ ಹಿರಿಯರ ನಿಧನಕ್ಕೆ ಸಂಬಂಧಿಸಿದಂತೆ ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ತಾವೇನು ಮಂಡಿಸಿದ್ದೀರಿ, ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಬಹುತೇಕ ರಾಷ್ಟ್ರದ ರಾಜಕಾರಣದಲ್ಲಿ ನಾವು ಯಾರೂ ಊಹಿಸಿಕೊಳ್ಳದಿರುವಂತಹ ಬಹು ದೊಡ್ಡ ವ್ಯಕ್ತಿತ್ವದ ಹಿರಿಯರಾಗಿದ್ದರು. ಒಬ್ಬ ಕವಿಯಾಗಿ, ಹೆಸರಾಂತ ಪತ್ರಕರ್ತರಾಗಿ, ಶ್ರೇಷ್ಠ ವಾಗ್ಮಿಯಾಗಿ, ಅತ್ಯಂತ ಭಾವನಾತ್ಮಕವಾದಂತಹ ಸಂಬಂಧವನ್ನು ಈ ರಾಷ್ಟ್ರದಲ್ಲಿ ಕಟ್ಟಿಕೊಟ್ಟವರು. ಒಂದೇ ಒಂದು ವಿಶೇಷವೆಂದರೆ ಮಾನ್ಯ ಅಟಲ್‌ಜೀ ಯವರು ಯಾವಾಗಲೂ 'ರಾಜಕಾರಣದಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ, ಆದರೆ ರಾಷ್ಟ್ರದ ಪ್ರಶ್ನೆ ಬಂದಾಗ ಪಕ್ಷಕ್ಕಿಂತ ರಾಷ್ಟ್ರವೇ ಮುಖ್ಯ' ಎನ್ನುವಂತಹ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದುದಷ್ಟೇ ಅಲ್ಲ, ಅದರಂತೆ ನಡೆದುಕೊಂಡಿದ್ದರು. 'ಅಟಲ್' ಎಂದರೆ, 'ಗಟ್ಟಿ ಸಾಧಕ' ಎಂದರ್ಥ. ಆ ಕಾರಣಕ್ಕಾಗಿಯೇ ಅವರ ತಂದೆ ಅವರಿಗೆ 'ಅಟಲ್' ಎಂದು ಹೆಸರು ಇಟ್ಟಿದ್ದರು ಎಂದು ಅನೇಕ ಲೇಖನಗಳು ಹೇಳುತ್ತವೆ. ಅವರ ವಿಚಾರಗಳನ್ನು ಇವತ್ತಿನ ರಾಜಕೀಯ ಕ್ಷೇತ್ರದಲ್ಲಿರುವಂತಹ ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. 25 ವರ್ಷಗಳ ಕಾಲ ಅವರು ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿಯವರು ಕಟ್ಟಿ ಬೆಳೆಸಿದಂತಹ ನಮ್ಮ ಜನಸಂಘವನ್ನು ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ರಾಷ್ಟ್ರಕ್ಕೋಸ್ಕರ ವಿಸರ್ಜನೆ ಮಾಡಿ ಜನತಾ ಪಕ್ಷವನ್ನು ಕಟ್ಟುತ್ತೇವೆ ಎಂದು ಹೇಳಿದಾಗ, ಆ 25 ವರ್ಷಗಳ ಕಾಲ ಒಂದು ರಾಜಕೀಯ ಪಕ್ಷದ ಭಾವನಾತ್ಮಕ ಭಾವನೆಗಳನ್ನು ಬೆಳೆಸಿಕೊಂಡವರು ಒಂದು ಸಲ ಬೆಚ್ಚಿ ಬಿದ್ದಿದ್ದರು. ಆದರೆ ಅದೇ ಸಂದರ್ಭದಲ್ಲಿ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ನಮಗೆ ನಮ್ಮ ಪಕ್ಷ ಮುಖ್ಯ, ವ್ಯಕ್ತಿ ಗೌಣ ಎಂದು ಹೇಳಿದ್ದರು. ಆದರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಷ್ಟ್ರದ ಪ್ರಶ್ನೆ ಬಂದಾಗ ನಮಗೆ ರಾಷ್ಟ್ರ ಮುಖ್ಯವಾಗುತ್ತದೆ. ಆ ಕಾರಣಕೋಸ್ಕರ ನಾವು ಪಕ್ಷವನ್ನು ವಿಸರ್ಜನೆ ಮಾಡಬೇಕು ಎನ್ನುವ ಮಾತನ್ನು ಆ ಸಂದರ್ಭದಲ್ಲಿ ಹೇಳಿದ್ದನ್ನು ನಾವೆಲ್ಲಾ ಕೇಳಿ ದಿಗ್ಭ್ರಮೆಗೊಂಡಿದ್ದೇವೆ.

ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ಯಾವಾಗಲೂ ತ್ರಿಕರಣ ಶುದ್ಧಾತ್ಮಕ ವ್ಯಕ್ತಿ ಎಂದು ನಾವು ಕರೆದಿದ್ದೆವು. ಬದುಕಿನ ದಾರಿಯಲ್ಲಿ ಅವರು ಎದುರಿಸಿದಂತಹ ಏರು ತಗ್ಗುಗಳು, ಅವರು ಅನುಭವಿಸಿದ ಸಿಹಿ–ಕಹಿಗಳು, ಇವುಗಳೆಲ್ಲಾ ಇವತ್ತಿನ ರಾಜಕಾರಣಿಗಳು, ಸಾಮಾನ್ಯ ಜನರು ಅರ್ಥ ಮಾಡಿಕೊಂಡರೆ ನಮಗೆ ಹೆಚ್ಚು ಶಕ್ತಿ ಬರುತ್ತದೆ. ಡಿಸೆಂಬರ್ 25ನೇ ತಾರೀಖು ಜಗತ್ತಿಗೇ ಶಾಂತಿ ಸಂದೇಶವನ್ನು ಸಾರಿದಂತಹ ಏಸುಕ್ರಿಸ್ತನ ಜನ್ಮ ದಿನ, ಅದೇ ದಿವಸ ಮಧ್ಯಪ್ರದೇಶದ ಗ್ವಾಲಿಯರ್ ಹತ್ತಿರದ 'ಶಿಂದೆ ಕಿ ಚವ್ವಾಣಿ' ಎನ್ನುವ ಗ್ರಾಮದಲ್ಲಿ ಅವರು ಜನಿಸುತ್ತಾರೆ. ಶಾಂತಿ ಧೂತ ಏಸುಕ್ರಿಸ್ತನ ಜನ್ಮದಿನದಂದೇ ಅವರು ಹುಟ್ಟಿದ ಕಾರಣಕ್ಕಾಗಿಯೋ ಏನೋ ಅವರು ತಮ್ಮ ಇಡೀ ಬದುಕಿನುದ್ದಕ್ಕೂ ಶಾಂತಿ ಸಂದೇಶದ ಒಬ್ಬ ಹರಿಕಾರನಾಗಿಯೇ ಈ ರಾಷ್ಟ್ರದ ನೆಲದಲ್ಲಿ ಬದುಕಿ ಬಾಳಿದರೇನೋ ಎನ್ನುವ ವಿಚಾರ ನಿಜಕ್ಕೂ ನಮಗೆ ಆಶ್ಚರ್ಯ ಅನಿಸಿಬಿಡುತ್ತದೆ. ಅವರ ತಂದೆಗೆ ಮಗ ಒಬ್ಬ ಕಾನೂನು ಪಂಡಿತನಾಗಬೇಕೆನ್ನುವ ಕಾರಣಕ್ಕಾಗಿ ಅವರನ್ನು ಕಾನೂನು ಕಾಲೇಜಿಗೆ ಸೇರಿಸಿದರಂತೆ. ಆದರೆ ಕೊನೆಯವರೆಗೂ ಕೂಡ ಅವರು ಪೂರ್ಣ ಪ್ರಮಾಣದ ವಕೀಲರಾಗುವುದಕ್ಕೆ ಸಾಧ್ಯವಾಗಲಿಲ್ಲ. ರಾಜಕಾರಣ ಅವರನ್ನು ಸೆಳೆದುಬಿಟ್ಟಿತ್ತು. ಸುಮಾರು ಆರು ದಶಕಗಳ ಕಾಲ ಭಾರತದ ರಾಜಕಾರಣದಲ್ಲಿ ಶತಕೋಟಿ ಮೀರಿದ ಭಾರತೀಯರ ಹೃದಯದಲ್ಲಿ ಚಿರಸ್ಥಾಯಿ ಆಗಿ ನಿಂತಿರುವಂತಹ ಕೆಲವೇ ರಾಜಕಾರಣಿಗಳಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ವ್ಯಕ್ತಿತ್ವ ಬಹಳ ದೊಡ್ಡದು ಅನಿಸುತ್ತದೆ. ಆನೇಕ ಸಲ ಪ್ರಪಂಚ ಒಪ್ಪಿರಬಹುದು; ಒಪ್ಪದಿರಬಹುದು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ, ಒಬ್ಬ ಪ್ರಚಾರಕನಾಗಿ ಊರೂರು ಸುತ್ತಿ ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಪಂಡಿತ್ ದೀನ್‌ದಯಾಳ್ ಶರ್ಮಾರವರ ಜೊತೆಗೂಡಿ 'ರಾಷ್ಟ್ರಧರ್ಮ' ಎಂಬ ಪತ್ರಿಕೆಯನ್ನು ಸ್ಥಾಪನೆ ಮಾಡಿ, ಇಡೀ ಬದುಕಿನುದ್ದಕ್ಕೂ ಸಹ ಅವರು ಸಂಘದ ಒಬ್ಬ ಕಾರ್ಯಕರ್ತನಾಗಿ ದುಡಿದು, ಅವರೊಬ್ಬ ದೃಢಚಿತ್ತ ಸೇನಾನಿ ಎಂದು ನಾವೆಲ್ಲಾ ಅವರನ್ನು ಕರೆಯುವುದಕ್ಕೆ ಅವಕಾಶಗಳಾಯಿತು. ಅವರಿಗೆ ಸಾಮಾನ್ಯರಿಗಿಂತ ಭಿನ್ನವಾದ ಆಸಕ್ತಿಗಳಿದ್ದವು. ಅವರು ತಮ್ಮ ಸಾಕು ನಾಯಿಯ ಜೊತೆಯಲ್ಲಿ ತಿರುಗಾಟ ಮಾಡುತ್ತಿದ್ದುದು, ವ್ಯಂಗ್ಯ ಚಿತ್ರಗಳನ್ನು ನೋಡಿದಾಗ ಮುಗ್ಧ ಮಗುವಿನ ರೀತಿಯಲ್ಲಿ ಅದಕ್ಕೆ ಸ್ಪಂಧಿಸುವುದು; ಸಂಗೀತಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಪಂಡಿತ್ ಭೀಮಸೇನ್ ಜೋಷಿಯವರ ಆಲಾಪನೆ, ಚೌರಾಸಿಯವರ ಕೊಳಲು, ಲತಾ ಮಂಗೇಶ್ಕರ್‌ರವರು ಹಾಡಿರುವ ಹಾಡುಗಳೆಂದರೆ ಅಟಲ್ ಬಿಹಾರಿ ವಾಜಪೇಯಿಯವರಿಗೆ ಬಹಳ ಅಚ್ಚುಮೆಚ್ಚು ಎಂದು ನಮಗನ್ನಿಸಿತ್ತು. ಅವರು ಭಾವನಾತ್ಮಕವಾದ ಸಂಬಂಧಗಳನ್ನು ಮತ್ತು ಸ್ನೇಹತ್ವವನ್ನು ಯಾವ ರೀತಿ ಚಾಚುತ್ತಿದ್ದರು ಎಂದರೆ, ಭಾರತವನ್ನು ವಿರೋಧಿಸುತ್ತಿದ್ದಂತಹ ಪಾಕಿಸ್ತಾನದ ಲಾಹೋರ್‌ಗೆ ಬಸ್ ಸಂಚಾರವನ್ನು ಮಾಡಿಯೇ ಬಿಟ್ಟರು. ಮದ್ದು–ಗುಂಡುಗಳ ಮೂಲಕ ನಮಗೆ ಬದುಕಲಿಕ್ಕೆ ಸಾಧ್ಯವಿಲ್ಲ; ಹಸ್ತಲಾಘವದ ಮೂಲಕ ನಾವೆಲ್ಲರೂ ಒಟ್ಟಾಗಿ ಬದುಕೋಣ ಎನ್ನುವಂಥ ಸಂದೇಶವನ್ನು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕೊಡುತ್ತಾರೆ. ಆದರೆ ಅದಕ್ಕೆ ವಿರುದ್ಧವಾಗಿ ಪಾಕಿಸ್ತಾನ ಕಾರ್ಗಿಲ್ ಯುದ್ಧದ ಕೊಡುಗೆಯನ್ನು ಕೊಟ್ಟಾಗ ಅವರು “ಪಾಕಿಸ್ತಾನದ ಕಟ್ಟಕಡೆಯ ಯಾವೊಬ್ಬ ಸೈನಿಕನೂ ಸಹ ಭಾರತದ ನೆಲದಿಂದ ತನ್ನ ಕಾಲನ್ನು ಕೀಳುವವರೆವಿಗೂ ಯಾವುದೇ ಕಾರಣಕ್ಕೂ ಯುದ್ಧವನ್ನು ನಿಲ್ಲಿಸುವುದಿಲ್ಲ” ಎಂದು ಹೇಳುತ್ತಾರೆ. ಮಧ್ಯಪ್ರವೇಶ ಮಾಡಿ ಅಮೇರಿಕಾದವರು ಎಚ್ಚರಿಕೆಯನ್ನು ಕೊಟ್ಟಾಗ ಅಟಲ್ ಬಿಹಾರಿ ವಾಜಪೇಯಿಯವರ ಗಟ್ಟಿತನ ಎಷ್ಟಿದೆ ಎಂಬುದರ ಅರಿವು ನಮಗಾಗುತ್ತದೆ. ಲಾಹೋರ್‌ನ ಮಾತುಕತೆಯ ಸಂದರ್ಭದಲ್ಲಿ ಪಾಕಿಸ್ತಾನದ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ನವಾಜ್ ಷರೀಫ್‌ರವರು ‘ಕಾಶ್ಮೀರ ನಮ್ಮ ಹಕ್ಕು’ ಎಂದು ಗಟ್ಟಿಯಾಗಿ ಹೇಳಿದಾಗ, ಅಷ್ಟೇ ಮುಗ್ಧತೆಯಿಂದ ಅಟಲ್ ಬಿಹಾರಿ ವಾಜಪೇಯಿಯವರು ಏನು ಹೇಳಿದರು ಎಂಬ ಮಾತನ್ನು ನಾವೆಲ್ಲರೂ ಒಮ್ಮೆ ನೆನಪು ಮಾಡಿಕೊಳ್ಳಬೇಕೆಂಬ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆ. “ಯಾವ ಆಧಾರದ ಮೇಲೆ ಕಾಶ್ಮೀರ ನಿಮ್ಮ ಹಕ್ಕು” ಎಂದು ಹೇಳುತ್ತೀರಿ ಎಂದು ಕೇಳಿದಾಗ ನವಾಜ್ ಷರೀಫ್‌ರವರು ಕಾಶ್ಮೀರದಲ್ಲಿ ಮುಸ್ಲಿಂ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಆ ಕಾರಣಕ್ಕಾಗಿ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕೆಂದು ಹೇಳುತ್ತಾರೆ. ಅದಕ್ಕೆ ಮರುತ್ತರವಾಗಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು “ದೇಶ ಇಬ್ಭಾಗವಾದಾಗ ನಾನು ಒಪ್ಪಲಿ, ಬಿಡಲಿ; ಧರ್ಮೀಯರ ನೆಲೆಯಲ್ಲಿ ಆವತ್ತಿನ ದಿವಸ ದೇಶ ತುಂಡಾಯಿತು. ಅಷ್ಟು ಮಾತ್ರವಲ್ಲ, ಇಂದು ಪಾಕಿಸ್ತಾನಕ್ಕಿಂತ ಭಾರತ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲೀಮರಿದ್ದಾರೆ. ನಾವೆಲ್ಲಾ ಒಟ್ಟಾಗಿ, ಒಂದಾಗಿ ಬದುಕುತ್ತೇವೆನ್ನುವ ಸಂದೇಶವನ್ನು ಇಡೀ ದೇಶಕ್ಕೆ, ಇಡೀ ಜಗತ್ತಿಗೆ ಕೊಟ್ಟಿದ್ದೇವೆ. ಆ ಕಾರಣಕ್ಕೋಸ್ಕರ ನಿಮಗೆ ಈ ಬಗ್ಗೆ ಮಾತನಾಡುವಂಥ ಹಕ್ಕಿಲ್ಲ.” ಎಂದು ಗಟ್ಟಿಯಾದ ಧ್ವನಿಯಲ್ಲಿ ಹೇಳಿದಾಗ ಪಾಕಿಸ್ತಾನದ ಪ್ರಧಾನ ಮಂತ್ರಿಗಳಾಗಿದ್ದಂಥ ಶ್ರೀ ನವಾಜ್ ಷರೀಫ್‌ರವರು ಬಾಯಿ ಮುಚ್ಚಿಬಿಟ್ಟರು ಎಂದು ಅಂದಿನ ಮಾಧ್ಯಮಗಳು ವರದಿ ಮಾಡಿದ್ದನ್ನು ನಾವು ಕೇಳಿದ್ದೇವೆ. ಒಟ್ಟಾರೆ ಭಾರತಕ್ಕೆ ಒಂದು ಶಕ್ತಿಯಾಗಿ ಅವರು ಗಟ್ಟಿತನವನ್ನು ಕೊಟ್ಟಿದ್ದರು. ಪೋಖ್ರಾನ್ ಅಣು ಪರೀಕ್ಷೆ ದಿನಗಳನ್ನು ನಾವು ನೆನಪು ಮಾಡಿಕೊಂಡಾಗ ಸನ್ಮಾನ್ಯ ಅಟಲ್‌ಜೀಯವರಲ್ಲಿ ಒಂದು ಗಟ್ಟಿತನದ ನಿಲುವು ಇತ್ತು ಎಂಬುದು ನಮಗೆ ಗೊತ್ತಾಗುತ್ತದೆ. ಭಾರತಕ್ಕೆ ಅಣುಬಾಂಬ್ ಬೇಕೇ ಬೇಡವೇ ಎನ್ನುವುದರ ಬಗ್ಗೆ ಚರ್ಚೆಯಾದಾಗಲೆಲ್ಲಾ, ಸನ್ಮಾನ್ಯ ಅಟಲ್‌ಜೀರವರು ಏಕವ್ಯಕ್ತಿಯಾಗಿ ನಿಂತು ಈ ರೀತಿ ಹೇಳುತ್ತಿದ್ದರು; ‘ಅಮೇರಿಕಾ ಜಪಾನ್ ಮೇಲೆ ಅಣುಬಾಂಬ್ ಪ್ರಯೋಗ ಮಾಡುವಾಗ ಜಪಾನ್ ದೇಶದವರ ಕೈಯಲ್ಲಿ ಬಾಂಬ್ ಇರಲಿಲ್ಲ. ಅದಕ್ಕೋಸ್ಕರ ಜಪಾನ್ ಸೋತು ಹೋಯಿತು. ಹಾಗಾಗಿ ಭಾರತ ದೇಶ ಅಣುಬಾಂಬ್‌ನ್ನು ಹೊಂದಿರಬೇಕು. ಆದರೆ ಅದನ್ನು ಪ್ರಯೋಗ ಮಾಡಬೇಕೋ, ಬೇಡವೋ ಎನ್ನುವ ಬಗ್ಗೆ ಪುನಃ ಯೋಚನೆ ಮಾಡೋಣ ಎಂದರು. ನಮ್ಮ ಹತ್ತಿರ ಅಣುಬಾಂಬ್ ಇದೆ ಎನ್ನುವ ಒಂದೇ ಕಾರಣಕ್ಕೋಸ್ಕರ ವಿರೋಧಿ ದೇಶಗಳು ನಮ್ಮ ಶಕ್ತಿಯನ್ನು ಅಳತೆ ಮಾಡಿ, ನಮ್ಮ ವಿರುದ್ಧ ಯುದ್ಧ ಮಾಡುವುದನ್ನು ನಿಲ್ಲಿಸಿಬಿಡುತ್ತವೆ. ಆ ಕಾರಣಕ್ಕೋಸ್ಕರ ನಮ್ಮಲ್ಲಿ ಪೋಖ್ರಾನ್ ಅಣು ಪರೀಕ್ಷೆ ಮಾಡಬೇಕೆನ್ನುವ ತೀರ್ಮಾನವನ್ನು ಅಟಲ್‌ಜೀರವರು ಅಂದು ತೆಗೆದುಕೊಂಡರು. ಅನೇಕ ದೇಶಗಳು ಈ ಬಗ್ಗೆ ಭಾರತಕ್ಕೆ ದಿಗ್ಬಂಧನವನ್ನು ಮಾಡಿದಾಗ ಅಟಲ್‌ಜೀರವರು ‘ಭಾರತೀಯರಾದ ನಾವು ಒಪ್ಪೊತ್ತಿನ ಊಟವನ್ನಾದರೂ ನಿಲ್ಲಿಸುತ್ತೇವೆ. ಆದರೆ ವಿರೋಧಿ ದೇಶಗಳಿಗೆ ಹೆದರುವಂಥ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಶ್ನೆಯೇ ಇಲ್ಲ, ಅವರಿಗೆ ಮಣಿಯುವುದೂ ಇಲ್ಲ.' ಎಂದು ಹೇಳಿದಾಗ ಇಡೀ ಜಗತ್ತು ಈ ಮಾತುಗಳನ್ನು ಕೇಳಿ ಬೆರಗಾಯಿತು ಎನ್ನುವಂಥ ಮಾತುಗಳನ್ನು ನಾವು ಕೇಳುತ್ತೇವೆ.

ಪಾಕಿಸ್ತಾನ ಮತ್ತು ಭಾರತದ ನಡುವೆ ಯುದ್ಧವಾದಾಗ ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಸಾಮಾನ್ಯವಾದ, ಸಹಜವಾದ ಟೀಕೆ–ಟಿಪ್ಪಣಿಗಳು ಬಂದೇ ಬರುತ್ತವೆ. ಲೋಕಸಭೆಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರನ್ನು ಉದ್ದೇಶಿಸಿ ಅಟಲ್‌ಜೀರವರು, 'ನೀವು ಕೇವಲ ಈ ದೇಶದ ಪ್ರಧಾನ ಮಂತ್ರಿ ಮಾತ್ರವಲ್ಲ, ನಮ್ಮ ಭಾರತದ ದುರ್ಗೆ' ಎಂದರು. ಒಬ್ಬ ಸಾಮಾನ್ಯ ಹೆಣ್ಣುಮಗಳು ಎಂದು ತಿಳಿದುಕೊಂಡು ಈ ದೇಶ ನಿಮ್ಮನ್ನು ಪ್ರೀತಿಸುತ್ತದೆ. ಆದರೆ ಇಂದಿರಾಗಾಂಧಿಯಾದ ನೀವು ಈ ದೇಶಕ್ಕೆ ಪ್ರಧಾನಿ ಮಾತ್ರವಲ್ಲ, ಶತ್ರುಗಳನ್ನು ಜಯಿಸಿದ್ದಂಥ ಭಾರತದ ದುರ್ಗೆ' ಎಂದು ಹೇಳಿದಾಗ ಇಡೀ ಜಗತ್ತು, ಅಟಲ್‌ಜೀರವರ ಕಡೆಗೆ, ಭಾರತದ ಕಡೆಗೆ, ಇಂದಿರಾಗಾಂಧಿಯವರ ಕಡೆಗೆ ನೋಡುತ್ತದೆ. ಒಟ್ಟಾರೆ ಇಡೀ ದೇಶ ಒಟ್ಟಾರೆ ಒಂದು ಯುದ್ಧವನ್ನು ಗೆದ್ದಿದೆ ಎನ್ನುವಂಥ ಮಾತು ಮತ್ತು ಈ ದೇಶದ ಪ್ರಶ್ನೆ ಬಂದಾಗ ಪಕ್ಷವನ್ನು ಮೀರಿ ಪ್ರಧಾನ ಮಂತ್ರಿಗಳನ್ನು ಅಭಿನಂದಿಸಿದಂತಹ ರೀತಿ ಈ ಜಗತ್ತಿಗೆ ಹೊಸ ಸಂದೇಶವನ್ನು ಕೊಡುತ್ತದೆ ಎಂದು ನಮಗನ್ನಿಸಿ ಬಿಡುತ್ತದೆ.

1980ರ ದಶಕದ ಅವಧಿಯಲ್ಲಿ ನಮ್ಮ ಪಕ್ಷವನ್ನು ನೋಡಿ ಎಲ್ಲರೂ ನಗುತ್ತಿದ್ದರು; ನಾನಿರುವಂಥ ಗ್ರಾಮದಲ್ಲಿ ಅನೇಕ ರಾಜಕೀಯ ನಾಯಕರು ನನ್ನನ್ನು ನೋಡಿ ನಗುತ್ತಿದ್ದರು. "ಶ್ರೀನಿವಾಸ ಪೂಜಾರಿ, ನಿನ್ನ ಮೊಮ್ಮಕ್ಕಳ ಕಾಲಕ್ಕೆ ನಿಮ್ಮ ಊರಿನಲ್ಲಿ ನಿಮ್ಮ ಜನಸಂಘ ಪಕ್ಷದಿಂದ ಒಬ್ಬ ಗ್ರಾಮ ಪಂಚಾಯ್ತಿ ಸದಸ್ಯರು ಆಯ್ಕೆಯಾಗಿ ಬರುತ್ತಾರೆ." ಎಂದು ಹೇಳುತ್ತಿದ್ದರು. ಅದೇ ರೀತಿ ಲೋಕಸಭೆಯಲ್ಲಿಯೂ 1980ರ ದಶಕದಲ್ಲಿ ಸುಮಾರು 37 ವರ್ಷಗಳ ಹಿಂದೆ ಅಟಲ್‌ಜೀರವರನ್ನು ನೋಡಿ ಎಲ್ಲರೂ ನಗುತ್ತಿದ್ದರಂತೆ. ಆಗ ಅಟಲ್‌ಜೀರವರು ಒಂದು ಕಡೆ "ಕತ್ತಲು ಹೋಗುತ್ತದೆ, ಬೆಳಕು ಮತ್ತೆ ಪ್ರಜ್ವಲಿಸುತ್ತದೆ; ಕಮಲ ಎಲ್ಲೆಡೆ ಅರಳುತ್ತದೆ" ಎಂದು ಹೇಳಿದರಂತೆ.

(ಮುಂದು)

(319)10–12–2018(1–20)ಬಿಕೆಪಿ–ಎಂಡಿ
**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಮುಂದು. . )**

ಮಾನ್ಯ ಸಭಾಪತಿಯವರೇ, ಇವತ್ತು ದೇಶದ ರಾಜಕಾರಣದಲ್ಲಿನ ಇತಿಹಾಸದ ಮಗ್ಗಲು ಮಗುಚಿದೆ. ಸನ್ಮಾನ್ಯ ಅಟಲ್‌ಜೀಯವರು ಅಂದು ಹೇಳಿದ ನುಡಿ ಅವರ ಶಿಷ್ಯರಾದ, ಭಾರತದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ನರೇಂದ್ರ ಮೋದಿಯವರ ಮೂಲಕ ಇಡೀ ಭಾರತದಲ್ಲಿ ಕಮಲ ಅರಳಿದೆ ಎನ್ನುವಂತಹ ಸಂತೃಪ್ತಿ ನಮಗಿದೆ. ವಾಸ್ತವಿಕವಾಗಿ ಈ ವಿಚಾರಗಳನ್ನು ಹೇಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಮಗೆ ತೃಪ್ತಿ ಇದೆ. ಅಂದರೆ ಶ್ರೀಮಾನ್ ಅಟಲ್‌ಜೀಯವರ ಕವಿ ಹೃದಯ, ಸಂಸದೀಯಪಟುತ್ವ, ಅವರ ಕನಸುಗಾರಿಕೆ, ಇವೆಲ್ಲವೂ ಸಹ ಅತ್ಯಂತ ಅರ್ಥಗರ್ಭಿತವಾಗಿತ್ತು. ಶ್ರೀಮಾನ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಟಲ್‌ಜೀಯವರಿಗೆ ಪದ್ಮವಿಭೂಷಣ ಪ್ರಶಸ್ತಿ ಸಿಕ್ಕಿದಂತಹ ಸಂದರ್ಭದಲ್ಲಿ ದೆಹಲಿಯಲ್ಲಿ ಅವರಿಗೆ ಒಂದು ಸನ್ಮಾನ ಸಮಾರಂಭ ಆಯೋಜಿಸಲಾಗಿತ್ತು. ಆ ಸಮಾರಂಭದಲ್ಲಿ ಗ್ರಹಚಾರಕ್ಕೆ ಭಾಷಣ ಮಾಡುವವರೆಲ್ಲರೂ ಹೆಚ್ಚು ಸಮಯವನ್ನು ತೆಗೆದುಕೊಂಡು ಬಿಡುತ್ತಾರೆ. ಅಲ್ಲಿಯ ಮುನಿಸಿಪಾಲಿಟಿಯವರು ಸಮಯವನ್ನು ನಿಗದಿ ಮಾಡಿದ್ದರ ಪೈಕಿ 3 ನಿಮಿಷ ಮಾತ್ರ ಬಾಕಿ ಉಳಿದಿತ್ತು. ಎಲ್ಲರ ಮನಸ್ಸಿನಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಮಾತನಾಡುತ್ತಾರೆ, ಅವರ ಕವಿ ಹೃದಯದ ಮಾತುಗಳನ್ನು, ಅವರ ಕವನಗಳನ್ನು ಕೇಳಬೇಕೆಂಬ ಬಯಕೆ ಇತ್ತು. ಅಲ್ಲಿ ಲಕ್ಷಾಂತರ ಜನರು ಸೇರಿದ್ದರು. ಆದರೆ, ಅಲ್ಲಿನ ಸ್ಥಳೀಯ ಆಡಳಿತ ಸಂಸ್ಥೆಯವರು ಕೊಟ್ಟಿದ್ದಂತಹ ಸಮಯವನ್ನು ಗಮನದಲ್ಲಿಟ್ಟುಕೊಂಡಿದ್ದ ಮಾನ್ಯ ಅಟಲ್‌ಜೀಯವರು ಮಾತನಾಡುತ್ತಾ, ಇಡೀ ಸಮಾರಂಭಕ್ಕೆ ಇನ್ನು 3 ನಿಮಿಷ ಬಾಕಿ ಇದೆ, ಈ ಸಮಯದಲ್ಲಿ ಒಂದು ನಿಮಿಷದಲ್ಲಿಯಾದರೂ ಧನ್ಯವಾದಗಳನ್ನು ಹೇಳಬೇಕಲ್ಲವೆಂದು ಹೇಳಿ, ಇನ್ನುಳಿದ 2 ನಿಮಿಷದಲ್ಲಿ ನಾನು ಮಾತನಾಡುತ್ತೇನೆಂದು ಹೇಳಿ, ಯಾವ ಮಾತುಗಳನ್ನು ಸಹ ಹೇಳದೇ ಒಂದು ಚುಟುಕು ಮಾತಿನಲ್ಲಿ ಹೇಳುತ್ತಾರೆ. ಆ ಚುಟುಕಿನ ಕನ್ನಡ ಭಾವಾರ್ಥ ಏನು ಹೇಳುತ್ತದೆ ಎಂದರೆ, (ದೇವರನ್ನು ಗಮನದಲ್ಲಿಟ್ಟುಕೊಂಡು) "ಹೇ ಪ್ರಭು, ಆತ್ಮೀಯರನ್ನು ಆಲಂಗಿಸಿಕೊಳ್ಳಲಾಗದಷ್ಟು ದೊಡ್ಡವನನ್ನಾಗಿ ನನ್ನನ್ನು ಮಾಡಬೇಡ, ಅಹಂಕಾರದಿಂದ ನನ್ನನ್ನು ಮುಕ್ತಗೊಳಿಸು" ಎಂದು ಹೇಳುತ್ತಾರೆ. ಯಾರಾದರೂ ಆತ್ಮೀಯರು ನನ್ನ ಹತ್ತಿರ ಬಂದಾಗ ಅವರ ಹತ್ತಿರ ಹೋಗಿ ಅವರನ್ನು ಆಲಂಗಿಸಿಕೊಳ್ಳುವಷ್ಟು, ಪ್ರೀತಿ ತೋರಿಸಿಕೊಳ್ಳಲಾಗದಷ್ಟು ದೊಡ್ಡವನನ್ನಾಗಿ ನನ್ನನ್ನು ಮಾಡಬೇಡ ಮತ್ತು ಅಹಂಕಾರದಿಂದ ನನ್ನನ್ನು ಮುಕ್ತಿಗೊಳಿಸು ಎನ್ನುವಂತಹ ಮಾತುಗಳನ್ನು ಶ್ರೀಮಾನ್ ಅಟಲ್‌ಜೀಯವರು ಹೇಳಿದಾಗ, ಅಲ್ಲಿ ನೆರೆದಿದ್ದಂತಹ ಅವರ ಸಾವಿರಾರು ಅಭಿಮಾನಿಗಳಿಗೆ ಈ ಮಾತುಗಳು ತೃಪ್ತಿ ಕೊಡುತ್ತದೆ ಎನ್ನುವಂತಹ ಭಾವನೆಗಳಿವೆ. ಅಷ್ಟು ದೊಡ್ಡ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರು ಪ್ರಧಾನ ಮಂತ್ರಿಗಳಾಗಿದ್ದಾಗ, ವಿದೇಶಾಂಗ ಮಂತ್ರಿಗಳಾಗಿದ್ದಾಗ ಅನೇಕರು ಅವರ ಬಳಿ ಬಂದು ನಮಗೆ ಇಂತಹ ಕೆಲಸಗಳನ್ನು ಮಾಡಬೇಕು, ನೀವು ಹೇಳಿದರೆ ಈ ಕೆಲಸವಾಗುತ್ತದೆ ಎಂದು ಹೇಳಿದಾಗ "ದೇಶದ ಪ್ರಧಾನಿಯಾಗಿ ಒಂದು ಸಿನಿಮಾ ಟಿಕೇಟ್‌ಗೂ ಸಹ ಅಕ್ರಮವಾಗಿ ನಾನು ಶಿಫಾರಸ್ಸು ಮಾಡುವುದಿಲ" ಎಂದು ಅವರು ಹೇಳಿದರಂತೆ. ಪ್ರಧಾನಿಯಾಗಿರುವುದು ನನ್ನ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಾನು ನಿರ್ವಹಿಸಿ ಮನೆಗೆ ಹೋಗುತ್ತೇನೆ ಎನ್ನುವಂತಹ ಮಾತುಗಳನ್ನು ಅವರು ಹೇಳುತ್ತಿದ್ದರಂತೆ. ಅವರು ಎಂತಹ ಅಪ್ಪಟ ರಾಷ್ಟ್ರಭಕ್ತರು ಎಂದರೆ, ಅವರ ಸಾವಿನ ಸಂದರ್ಭದಲ್ಲಿ 'ನಾನು ಸತ್ತ ನಂತರ ನನ್ನ ಚಿತೆಯನ್ನು ಗಂಗೆಯಲ್ಲಿ ವಿಸರ್ಜನೆ ಮಾಡಿದಂತಹ ಸಂದರ್ಭದಲ್ಲಿ ಬರುವಂತಹ ಒಂದೊಂದು ಹರಳುಗಳು ಸಹ ಗಂಗೆಯಲ್ಲಿ ತೇಲಿ ಹೋಗುತ್ತಿರುವಾಗ ಯಾರಾದರೂ ಅದಕ್ಕೆ ಕಿವಿಗೊಟ್ಟರೆ ಆ ಒಂದೊಂದು ಕಣವೂ ಕೂಡ **"ಭಾರತ್ ಮಾತಾಕೀ ಜೈ"** ಎಂದು ಹೇಳುವುದು ನನಗೆ ಕೇಳಬೇಕೆನ್ನುವ ಆಸೆ ಇದೆ' ಎಂದು ಹೇಳಿದರಂತೆ. ಈ ದೇಶಕ್ಕೋಸ್ಕರವಾಗಿ ಇಡೀ ತಮ್ಮ ಬದುಕನ್ನು ಸಮರ್ಪಣೆ ಮಾಡಿದಂತಹ ಹಿರಿಯರಾದ ಶ್ರೀಮಾನ್ ಅಟಲ್‌ಜೀಯವರ ನಿಧನದಿಂದ ಒಬ್ಬ ಶ್ರೇಷ್ಠ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವಂತಹ ಸಂಕಟಗಳು ನಮ್ಮನ್ನು ಕಾಡುತ್ತಿವೆ. ಅವರಿಗೆ ತಮ್ಮ ಮೂಲಕ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇನ್ನು ಕೇಂದ್ರ ಸಚಿವರಾಗಿ ಕೆಲಸ ನಿರ್ವಹಿಸುತ್ತಿದ್ದಂತಹ ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರು ಸಹ ನಮ್ಮನ್ನು ಅಗಲಿದ್ದಾರೆ. ಅವರ ಬಗ್ಗೆ ನಾನು ಹೇಳಬೇಕಾದಂತಹ ಅವಶ್ಯಕತೆಗಳಿಲ್ಲ. ನಮಗೆ ಒಂದು ಆಸೆ ಇದ್ದುದು ಏನೆಂದರೆ, ಶ್ರೀ ಹೆಚ್.ಎನ್.ಅನಂತ್ ಕುಮಾರ್ ರವರು ಇನ್ನಷ್ಟು ವರ್ಷಗಳ ಕಾಲ ಈ ದೇಶವನ್ನು, ಈ ರಾಜ್ಯವನ್ನು ಮುನ್ನಡೆಸುತ್ತಾರೆ, ನಮ್ಮ ಪಕ್ಷದ ಮುಖಂಡರಾಗಿ ಮುಂದುವರಿಯುತ್ತಾರೆ ಎನ್ನುವ ಆಸೆ ನಮ್ಮಲ್ಲಿ ಇತ್ತು. ನಿಜಕ್ಕೂ ಕೂಡ ಈ ಕ್ಷಣದವರೆಗೂ ಸಹ ನಮಗೆ ಕಲ್ಪನೆ ಇರುವುದು ಭಾರತೀಯ ಜನತಾ ಪಕ್ಷಕ್ಕೆ, ಕರ್ನಾಟಕದ ನಿಜವಾದ ಮೆದುಳು ಯಾವುದು ಎಂದು ಕೇಳಿದರೆ ಅದು ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರು ಎಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಸಂಕಷ್ಟಗಳು ಬಂದಾಗ, ಸಮಸ್ಯೆಗಳು ಬಂದಾಗ, ಸಾವಾಲುಗಳು ಬಂದಾಗ ನಾವೆಲ್ಲರೂ ಒಟ್ಟಾಗಿ ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರನ್ನು ಭೇಟಿಯಾಗಿ ಈ ನಿಟ್ಟಿನಲ್ಲಿ ನಾವು ಏನು ಮಾಡಬೇಕೆಂದು ಅವರನ್ನು ಕೇಳುತ್ತಿದ್ದೆವು. ಅಂತಹ ಒಬ್ಬ ಹಿರಿಯರನ್ನು ನಾವು ಕಳೆದುಕೊಂಡಿರುವುದು ಸಹಜವಾಗಿ ನಮಗೆ ನೋವು ತಂದಿರುತ್ತದೆ. ಆ ನೋವಿನಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ ಎನ್ನುವಂತಹ ಸತ್ಯ ನಮಗೆ ಗೊತ್ತಿದೆ. ನಮ್ಮ ಪಕ್ಷ ಅತ್ಯಂತ ಕಷ್ಟದಲ್ಲಿದ್ದಂತಹ ಸಂದರ್ಭದಲ್ಲಿ, ಒಂದು ಮುನಿಸಿಪಾಲಿಟಿಯೂ ಸಹ ನಮ್ಮ ಜೊತೆಯಲ್ಲಿ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಪಕ್ಷಕ್ಕೋಸ್ಕರ ಶ್ರಮಿಸುತ್ತಿರುವಾಗ ಈ ಕರ್ನಾಟಕದಲ್ಲಿ ಒಬ್ಬ ಯುವ ವಕೀಲನಾದ ಶ್ರೀ ಹೆಚ್.ಎನ್.ಅನಂತ್ ಕುಮಾರ್ ಎನ್ನುವಂತಹ ಮತ್ತೊಬ್ಬ ಹುಡುಗನನ್ನು ಹುಡುಕಲಾಯಿತು. ವಕಾಲತ್ತನ್ನು ಪ್ರಾರಂಭ ಮಾಡುತ್ತಿರುವಾಗಲೇ ಶ್ರೀಮಾನ್ ಯಡಿಯೂರಪ್ಪನವರು ಹೋಗಿ “ಅನಂತ್ ಕುಮಾರ್‌ರವರೆ, ಒಟ್ಟಾಗಿ ಸೇರಿ ಪಕ್ಷವನ್ನು ಕಟ್ಟೋಣ; ಇವತ್ತಲ್ಲಾ, ನಾಳೆ ಈ ಪಕ್ಷದಲ್ಲಿ ಶಕ್ತಿಯನ್ನು ಪಡೆಯುತ್ತೇವೆ” ಎನ್ನುವಂತಹ ಮಾತನ್ನು ಹೇಳಿದರಂತೆ. ಅದೇ ಮಾತನ್ನು ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರು ಹೇಳುತ್ತಿದ್ದರು. ಅಲ್ಲದೆ ಮುಂದುವರೆದು ಅವರು “ಅನೇಕ ಸವಾಲುಗಳು, ಸಮಸ್ಯೆಗಳು, ಅಭಿಪ್ರಾಯಗಳು ಬೇರೆ ಬೇರೆ ಇದ್ದರೂ ಕೂಡ ನಾನು ಮತ್ತು ಶ್ರೀಮಾನ್ ಯಡಿಯೂರಪ್ಪನವರು ಕರ್ನಾಟಕ ರಾಜ್ಯದಲ್ಲಿ ಅಕ್ಕ–ಬುಕ್ಕರಂತೆ, ಕೋಟಿ ಚೆನ್ನಯ್ಯನವರಂತೆ ಪಕ್ಷವನ್ನು ಕಟ್ಟಿ ಬೆಳೆಸುತ್ತೇವೆ” ಎನ್ನುವಂತಹ ಗಟ್ಟಿ ಮಾತುಗಳನ್ನಾಡುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಯಾವುದೇ ಒಂದು ಯೋಜನೆಯನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಕಾರ್ಯಕರ್ತರಾದ ನಮಗೆ ಅದರ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದರು. ಮೆಟ್ರೋ ರೈಲು ಪ್ರಾರಂಭದ ವಿಚಾರ ಬಂದಾಗ ಅವರು ನಮ್ಮೆಲ್ಲರನ್ನು ಕರೆದು ಮಾತನಾಡಿದ್ದರು. ಬೆಂಗಳೂರಿನಲ್ಲಿ ಮೆಟ್ರೋ ರೈಲು ಸಂಚಾರವನ್ನು ಪ್ರಾರಂಭಿಸುವ ಅಗತ್ಯೆ ಬಗ್ಗೆ ನಮಗೆ ಮನವರಿಕೆ ಮಾಡಿಕೊಟ್ಟಾಗ ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರ ತಾಕತ್ತು ಏನು ಎಂದು ನಮಗೆಲ್ಲರಿಗೂ ಅರಿವಾಗಿತ್ತು. ಮೊನ್ನೆ ನಾನು ವಿರೋಧ ಪಕ್ಷದ ನಾಯಕನಾಗಿದ್ದಂತಹ ಸಂದರ್ಭದಲ್ಲಿ ಸೌಜನ್ಯಕ್ಕೆ ಭೇಟಿಯಾಗಲೆಂದು ಅವರ ಮನೆಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಅವರು ಪ್ರಾಸಬದ್ಧವಾಗಿ ಒಂದು ಮಾತನ್ನು ಹೇಳಿದರು. ಯಾವಾಗಲೂ ನಮ್ಮನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದ ಮಾತುಗಳ ನಡುವೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ಕರ್ನಾಟಕ ರಾಜ್ಯದ ವಿರೋಧ ಪಕ್ಷದ ನಾಯಕನಾದ ನೀವು ನಮ್ಮ ಪಕ್ಷದಲ್ಲಿ ವಿರೋಧವಿಲ್ಲದೆಯೇ ವಿರೋಧ ಪಕ್ಷದ ನಾಯಕರಾಗಿದ್ದೀರಿ. ಆದರೆ, ಬದುಕಿನ ಒಂದೊಂದು ಕ್ಷಣವೂ ಕೂಡ ಪಕ್ಷದ ಸಂಘಟನೆಗೆ ಮತ್ತು ಜವಾಬ್ದಾರಿಗೋಸ್ಕರ ವಿನಿಯೋಗ ಮಾಡಬೇಕು. ಅಧಿಕಾರಕ್ಕೆ ನಮ್ಮನ್ನು ನಾವು ಮಾರಿಕೊಳ್ಳಬಾರದು. ಅದಕ್ಕೆ ಬದಲಾಗಿ ಅಧಿಕಾರವನ್ನು ಸದ್ವಿನಿಯೋಗ ಮಾಡಲಿಕ್ಕೆ ಒಂದೊಂದು ನಿಮಿಷವನ್ನು ನೀವು ಉಪಯೋಗ ಮಾಡಬೇಕು" ಎಂದಾಗ ನಾನು ಒಂದು ಕ್ಷಣ ಭಾವುಕನಾಗಿದ್ದೆ.

ಮಾನ್ಯ ಸಭಾಪತಿಯವರೇ, ಶ್ರೀಮಾನ್ ಹೆಚ್.ಎನ್.ಅನಂತ್ ಕುಮಾರ್‌ರವರು ಮಾಡಿರುವಂತಹ ಯೋಜನೆಗಳು, ಯೋಚನೆಗಳು, ನಾಗರೀಕ ವಿಮಾನಯಾನ ಮಂತ್ರಿಗಳಾಗಿ ಅವರು ಮಾಡಿರುವಂತಹ ಖಾತೆಗಳ ನಿರ್ವಹಣೆ, ಕ್ರೀಡಾ ಮತ್ತು ಯೋಜನಾ ಮಂತ್ರಿಗಳಾಗಿ ಅವರು ಮಾಡಿರುವಂತಹ ಕೆಲಸಗಳು, ನಗರಾಭಿವೃದ್ಧಿ, ಬಡತನ ನಿರ್ಮೂಲನೆ ಮಂತ್ರಿಗಳಾಗಿ ಅವರು ತಂದಿರುವಂತಹ "ಅಟಲ್ ಬಿಹಾರಿ ವಾಜಪೇಯಿ ಆವಾಸ್ ಯೋಜನಾ" ಅಥವಾ "ಪ್ರಧಾನ ಮಂತ್ರಿ ಆವಾಸ್ ಯೋಜನಾ" ಎನ್ನುವಂತಹ ವಸತಿ ಯೋಜನೆಗಳು, ಅವರು ಪ್ರವಾಸೋದ್ಯಮ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ದೇಶದ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಿಗೆ ವಿದೇಶಿ ಪ್ರವಾಸಿಗರನ್ನು ಸೆಳೆಯಲಿಕ್ಕೆ ಅವರು ಮಾಡಿರುವಂತಹ ಕಾರ್ಯತಂತ್ರ, ಅದರ ಮೂಲಕ ಈ ದೇಶಕ್ಕೆ 14 ಸಾವಿರ ಕೋಟಿ ರೂಪಾಯಿಗಳು ಆದಾಯ ಬಂದಿರುವಂತಹದ್ದು. 4.05 ಮಿಲಿಯನ್ ಉದ್ಯೋಗಗಳು ಸೃಷ್ಟಿಯಾಗಿರುವಂತಹದ್ದು ಒಂದು ಚಾರಿತ್ರಿಕ ದಾಖಲೆ ಎಂದು ಅನಿಸುತ್ತದೆ. ಭಾರತಕ್ಕೆ ಗಣತಂತ್ರ ಬಂದು 50 ವರ್ಷಗಳಾಗಿದ್ದಂತಹ ಸಂದರ್ಭದಲ್ಲಿ ಸಂಸ್ಕೃತಿ ಸಚಿವರಾಗಿ ಅವರು ಮಾಡಿದಂತಹ ಅನೇಕ ಯೋಜನೆಗಳು ನಮ್ಮ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ನಿಲ್ಲುತ್ತವೆ. ರಾಸಾಯನಿಕ ಗೊಬ್ಬರ ಮಂತ್ರಿಯಾಗಿ ಶೇಕಡಾ 100 ರಷ್ಟು ಬೇವು ಮಿಶ್ರಿತ ಯೂರಿಯವನ್ನು ಪೂರೈಕೆ ಮಾಡಿದ ಪರಿಣಾಮವಾಗಿ ಕೇಂದ್ರ ಸರ್ಕಾರದ ಖಾತೆಗೆ ಹೆಚ್ಚುವರಿಯಾಗಿ 10 ಸಾವಿರ ಕೋಟಿ ರೂಪಾಯಿಗಳ ಆದಾಯ ಬಂದಿರುತ್ತದೆ. ಈ ಎಲ್ಲಾ ವಿಚಾರಗಳು ಅತ್ಯಂತ ಸ್ಮರಣೀಯ ವಿಚಾರಗಳಾಗಿವೆ.

"ಅದಮ್ಯ ಚೇತನ" ಎನ್ನುವಂತಹ ಒಂದು ಸಂಸ್ಥೆಯೊಂದನ್ನು ಅವರು ಸ್ಥಾಪಿಸಿದ್ದಾರೆ. ಈಗಲೂ ಸಹ ಊಹೆ ಮಾಡಲು ಕಷ್ಟ, ಸುಮಾರು 84 ಸಾವಿರ ಮಕ್ಕಳು ಒಂದೇ ಕಡೆಯಲ್ಲಿ ಊಟ ಮಾಡುತ್ತಾರೆ. ಜೊತೆಗೆ ಬೇರೆ ಬೇರೆ ಪ್ರದೇಶಗಳ ಸುಮಾರು 2 ಲಕ್ಷ ಮಕ್ಕಳಿಗೆ ಊಟ ತಯಾರಿಸಿ ಸರಬರಾಜು ಮಾಡುವಂಥದ್ದನ್ನು ಗಮನಿಸಿದರೆ ಅದರ ಸ್ಥಿತಿಯ ಬಗ್ಗೆ ತಿಳಿದು ಬರುತ್ತದೆ. ಯಾವ ರೀತಿಯಲ್ಲಿ ಈ ಯೋಜನೆಯನ್ನು ರೂಪಿಸಿದ್ದಾರೆಂದರೆ ಸನ್ಮಾನ್ಯ ಅನಂತ್ ಕುಮಾರ್ ರವರ ನಿಧನದ ದಿನವೂ ಸಹ ಅಷ್ಟೊಂದು ಮಕ್ಕಳಿಗೂ ಸಹ ಊಟ ಸರಬರಾಜು ಆಯಿತು ಎನ್ನುವುದು ಸಣ್ಣ ವಿಚಾರವಾಗಿ ನಮಗೆ ತೋರಿಲ್ಲ. ಹೀಗಾಗಿ ಶ್ರೀಮಾನ್ ಅನಂತ್ ಕುಮಾರ್‌ರವರು ಇನ್ನಷ್ಟು ದಿನಗಳು ನಮಗೆ ಮಾರ್ಗದರ್ಶನ ಮಾಡುತ್ತಾರೆಂದು ಅನಿಸಿತ್ತು. ಒಂದು ಹಂತದಲ್ಲಿ ಭಾರತ ದೇಶದಲ್ಲಿ, ಭಾರತೀಯ ಜನತಾ ಪಕ್ಷದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಂದಿನ ರಾಷ್ಟ್ರಾಧ್ಯಕ್ಷರು ಯಾರಾಗಬಹುದು ಎನ್ನುವಂತಹ ಚರ್ಚೆಗಳು ಬಂದಾಗ ಅಂದರೆ, ದೇಶದಲ್ಲಿ ಮತ್ತು ರಾಜ್ಯದಲ್ಲಿ ಮೂರು ವರ್ಷಗಳಿಗೊಮ್ಮೆ ಪಕ್ಷದ ರಾಜ್ಯಾಧ್ಯಕ್ಷರು, ರಾಷ್ಟ್ರಾಧ್ಯಕ್ಷರಾಗಿ ಬದಲಾಗುವುದು ನಮ್ಮ ಸಂಪ್ರದಾಯ. ಪಕ್ಷದ ರಾಷ್ಟ್ರಾಧ್ಯಕ್ಷರು ಯಾರಾಗಬೇಕೆನ್ನುವ ಪ್ರಶ್ನೆ ಬಂದಾಗ ಬೆರಳೆಣಿಕೆಯ ಹೆಸರುಗಳ ಪೈಕಿ ಅತ್ಯಂತ ಬುದ್ಧಿವಂತ, ಪಕ್ಷವನ್ನು ಮುನ್ನಡೆಸುವಲ್ಲಿ ಸಮರ್ಥ, ಒಳ್ಳೆಯ ಸಂಸದೀಯ ಪಟುಗಳಲ್ಲಿ ಶ್ರೀಮಾನ್ ಅನಂತ್‌ಕುಮಾರ್‌ರವರು ಒಬ್ಬರು ಎಂದು ಹೇಳಿದಾಗ ಅಂದಿನ ದಿವಸ ನಮ್ಮ ಮನಸ್ಸು ಪುಳಕಿತವಾಗಿತ್ತು. 59 ವರ್ಷಗಳ ಸಣ್ಣ ವಯಸ್ಸಿನಲ್ಲಿ ನಾವು ಅವರನ್ನು ಕಳೆದುಕೊಂಡಾಗ ಸಹಜವಾಗಿ ನಮ್ಮೆಲ್ಲರ ಮನಸ್ಸಿಗೂ ಬಹಳ ದುಃಖ ಉಂಟಾಯಿತು. ಅಂತಹ ಒಬ್ಬ ಹಿರಿಯರನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವಂತಹ ದುಗುಡ ನಮ್ಮಲ್ಲಿದೆ.

ಇನ್ನು ಶ್ರೀಮಾನ್ ಸೋಮನಾಥ ಚಟರ್ಜಿಯವರ ನಿಧನದ ಬಗ್ಗೆ ಸಹ ಸಂತಾಪವನ್ನು ವ್ಯಕ್ತ ಪಡಿಸಿದ್ದೀರಿ. ಶ್ರೀಯುತರು ಹಿರಿಯ ಕಮ್ಯೂನಿಷ್ಟ್ ಮುಖಂಡರಾಗಿ, ಲೋಕಸಭೆಯ ಸಭಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಮಾತುಗಳು, ಅವರ ತೀರ್ಪುಗಳನ್ನು ಗಮನಿಸಿದಾಗ ಅವೆಲ್ಲಾ ನಮಗೆ ಬಹಳ ಚೆಂದವೆಂದು ನಮಗೆ ಅನಿಸುತ್ತಿತ್ತು. ಅವರು 7 ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಆದರೆ, ಮಾನ್ಯ ಸದಸ್ಯರು 11 ಬಾರಿ ಸಂಸದರಾಗಿದ್ದರು ಎಂದು ಹೇಳುತ್ತಿದ್ದಾರೆ. ಯಾವುದು ಸರಿ ಇದೆ, ಅದನ್ನು ತಿದ್ದುಪಡಿ ಮಾಡಿಕೊಳ್ಳೋಣ.

ಇನ್ನು ಹಿರಿಯ ಸಂಸದೀಯ ಪಟುಗಳಾಗಿದ್ದಂತಹ ಶ್ರೀಮಾನ್ ಜಾಫರ್ ಷರೀಫ್‌ರವರು ನಮ್ಮನ್ನು ಆಗಲಿದ್ದಾರೆ. ಶ್ರೀಯುತರು ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲ್ಲೂಕಿನ ದೊಡ್ಡೇರಿ ಗ್ರಾಮದಲ್ಲಿ ಜನಿಸಿದ್ದರು. ಅವರು ರೈಲ್ವೇ ಸಚಿವರಾಗಿ ಮೈಸೂರು ಮತ್ತು ಬೆಂಗಳೂರು ನಡುವಿನ ಚಾಮುಂಡಿ ಎಕ್ಸ್‌ಪ್ರೆಸ್, ಟಿಪ್ಪು ಎಕ್ಸ್‌ಪ್ರೆಸ್, *Railway broad-gauge* ನ ಹರಿಕಾರರು ಎನ್ನುವಂತಹ ಗೌರವಕ್ಕೆ ಪಾತ್ರರಾಗಿದ್ದರು. ಜೊತೆಗೆ ಎಲ್ಲಕ್ಕಿಂತ ಹೆಚ್ಚಿನದಾಗಿ ಕರ್ನಾಟಕ ರಾಜ್ಯದಲ್ಲಿ ಅವರ ಹಿರಿತನ, ಗೌರವ ಮತ್ತು ಎಲ್ಲರನ್ನೂ ಸಹ ವಿಶ್ವಾಸದಿಂದ ಕೊಂಡೊಯ್ಯುವ ಅವರ ರೀತಿ, ಈ ಎಲ್ಲವೂ ಸಹ ನಮಗೆ ಒಂದು ರೀತಿಯಲ್ಲಿ ಮಾರ್ಗದರ್ಶನವಾಗಿದೆ.

ಮಾಜಿ ಸಚಿವರು ಹಾಗೂ ನಮಗೆಲ್ಲರಿಗೂ ಹಿರಿಯರಾದ ಡಾ॥ ಎಂ.ಹೆಚ್.ಅಂಬರೀಷ್‌ರವರ ನಿಧನದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ನಾನೇನು ಹೆಚ್ಚಿಗೆ ಹೇಳಬೇಕಾಗಿಲ್ಲ. ಒಂದು ಬಾರಿ ಮಾನ್ಯ ಅಂಬರೀಷ್‌ರವರು ಕೇಂದ್ರ ಸಚಿವರಾಗಿದ್ದರು. ಕಾವೇರಿ ನೀರಿನ ವಿಷಯದ ಬಗ್ಗೆ ಚರ್ಚೆ ಬಂದಾಗ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಂದರು ಎನ್ನುವ ವಿಚಾರವನ್ನು ನಾನು ಮಾಧ್ಯಮದಲ್ಲಿ ನೋಡಿದ್ದೆ. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಯದಲ್ಲಿ ನನಗೆ ಅವರ ಪರಿಚಯ ಇರಲಿಲ್ಲ. ಡಾ॥ ಎಂ.ಹೆಚ್.ಅಂಬರೀಷ್‌ರವರು ಇಲ್ಲಿ ವಸತಿ ಸಚಿವರಾಗಿದ್ದಾಗ ಅವರ ಜೊತೆ ನಾನು ತುಂಬಾ ಜಗಳ ಮಾಡಿದ್ದೆನು.

ಮುಂದು. . .

(320) 10.12.2018 01.30 ಎಸ್‌ವಿ–ಎಂಡಿ
**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):–**

ನಮ್ಮ ಗ್ರಾಮಕ್ಕೆ ಮನೆ ಕೊಟ್ಟಿಲ್ಲ, ಬಡವರ ಮನೆಗಳು ಪೂರ್ಣಗೊಂಡಿಲ್ಲ ಈ ರೀತಿ ನಾನು ಯಾವಾಗಲೂ ಖಾಯಂ ಆಗಿ ಹೇಳುವುದನ್ನೆಲ್ಲಾ ಹೇಳಿ ಗಲಾಟೆ ಮಾಡುತ್ತಿದ್ದೆನು. ಕೊನೆಗೆ ಅವರು ನನ್ನನ್ನು ಕರೆದು "ನೀವು ಮಂಗಳೂರು ಮಂದಿ. ನಿಮ್ಮ ಭಾಷೆ ನಮಗೆ ಅರ್ಥವಾಗುವುದಿಲ್ಲ. ನೀವು ಹೊರಗೆ ಬಂದು ಏನು ಕೊಟ್ಟರೂ ಅದಕ್ಕೆ ನಾನು ಸಹಿ ಮಾಡಿಕೊಡುತ್ತೇನೆ. ನೀವು ಬಡವರ ಪರವಾಗಿ ಕೆಲಸ ಮಾಡುವವರು" ಎಂದು ಹೇಳಿದಾಗ ಅವರ ದೊಡ್ಡ ವ್ಯಕ್ತಿತ್ವ ನನಗೆ ಅರಿವಾಯಿತು. ಅಂತಹ ವ್ಯಕ್ತಿಯೊಬ್ಬರನ್ನು ನಾವು ಇಂದು ಕಳೆದುಕೊಂಡಿದ್ದೇವೆ.

ಆರನೆಯದಾಗಿ ದಿವಂಗತ ಶ್ರೀ ಮೀರ್ ಅಜೀಜ್ ಅಹಮದ್ ಅವರು ಕಾಂಗ್ರೆಸ್ಸಿನ ಹಿರಿಯ ಮುಖಂಡರಾಗಿದ್ದರು. ಅವರು ವಿಧಾನ ಪರಿಷತ್‌ನಲ್ಲಿ 2004ರಿಂದ 2010ರವರೆಗೆ ಸದಸ್ಯರಾಗಿದ್ದರು. ನನಗೆ ತಿಳಿದ ಹಾಗೆ ಅನೇಕ ಪ್ರಶ್ನೆಗಳನ್ನು ಕೇಳುವ ಮಾನಸಿಕತೆ ಅವರಲ್ಲಿ ಇತ್ತು.

ದಿವಂಗತ ಶ್ರೀ ಓಂಪ್ರಕಾಶ್ ಕಣಗಲಿಯವರು 1990–96ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಶ್ರೀ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿ ಬೃಹತ್ ನೀರಾವರಿ ರಾಜ್ಯ ಸಚಿವರಾಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು ಎಂದು ನಾನು ಕೇಳ್ಪಟ್ಟಿದ್ದೆನು.

ದಿವಂಗತ ಶ್ರೀ ತಿಪ್ಪೇಸ್ವಾಮಿಯವರು ಶ್ರೀ ಹೆಚ್.ಡಿ.ದೇವೇಗೌಡರ ಸಚಿವ ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಹಾಗೂ ಶ್ರೀ ಜೆ.ಹೆಚ್.ಪಟೇಲರ ಸಚಿವ ಸಂಪುಟದಲ್ಲಿ ನೀರಾವರಿ ಮಂತ್ರಿಯಾಗಿ ಅವರು ಸಲ್ಲಿಸಿದಂತಹ ಸೇವೆಯನ್ನು ಕರ್ನಾಟಕ ರಾಜ್ಯ ಸ್ಮರಿಸುತ್ತದೆ.

ದಿವಂಗತ ಶ್ರೀ ಇ.ಟಿ.ಶಂಭುನಾಥ್ ಅವರು ಹೂವಿನ ಹಡಗಲಿಯಲ್ಲಿ ಜನಿಸಿದರು. ಅದೇ ಕ್ಷೇತ್ರದಿಂದ 9ನೇ ವಿಧಾನ ಸಭೆಯ ಶಾಸಕರಾಗಿ ಆಯ್ಕೆಯಾಗಿದ್ದರು. ದಿವಂಗತ ಶ್ರೀ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ಅರಣ್ಯ ಮಂತ್ರಿಯಾಗಿದ್ದರು. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಕನಕ ಗುರುಪೀಠದ ಸ್ಥಾಪನೆಗೆ ಕಾರಣಕರ್ತರಾಗಿ ಶ್ರಮಿಸಿದ್ದರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿವಂಗತ ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ ಅವರು ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿ ದಿವಂಗತ ಶ್ರೀ ಜೆ.ಹೆಚ್.ಪಟೇಲರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದರು.

ದಿವಂಗತ ಶ್ರೀ ಎಂ.ಕರುಣಾನಿಧಿಯವರು ಈ ರಾಷ್ಟ್ರದ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದರು. 1957ರಿಂದಲೂ ಅವರು ಸ್ಪರ್ಧಿಸಿ ಅವರ ಬದುಕಿನ ಕೊನೆಯವರೆವಿಗೂ ಸೋಲನ್ನು ಕಂಡವರಲ್ಲ. ಇವರ ಒಟ್ಟು ರಾಜಕಾರಣದ ಶಕ್ತಿ ಹೇಗಿರಬಹುದು ಎಂಬುದು ಇದರಿಂದ ತಿಳಿದು ಬರುತ್ತದೆ. ಕರ್ನಾಟಕದ ಜೊತೆಯಲ್ಲಿ ಅವರು ಭಾವನಾತ್ಮಕ ಸಂಬಂಧಗಳನ್ನು ಹೊಂದಿದ್ದರು.

ಡಾ:ತೋಂಟದಾರ್ಯ ಸಿದ್ದಲಿಂಗ ಸ್ವಾಮೀಜಿಯವರ ನಿಧನದ ಬಗ್ಗೆ ತಾವೇ ಪ್ರಸ್ತಾಪ ಮಾಡಿರುತ್ತೀರಿ. ಅವರ ಬಗ್ಗೆ ಬಹಳ ಸುದೀರ್ಘವಾದಂತಹ ವಿಚಾರಗಳನ್ನು ಉಲ್ಲೇಖ ಮಾಡಲಾಗಿದೆ. ನಾಡು-ನುಡಿ, ನೆಲ-ಜಲದ ವಿಚಾರ ಬಂದಾಗ ಸ್ವಾಮೀಜಿಯವರು ಹೋರಾಟ ಮಾಡಿದ್ದು, ಗೋಕಾಕ್ ಚಳುವಳಿಯಲ್ಲಿ ಅವರು ನಿರಂತರವಾದ ಹೋರಾಟವನ್ನು ಮಾಡಿದ ರೀತಿ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ಮಾನಕ್ಕಾಗಿ ಒತ್ತಡ, ಡಾ:ನಂಜುಂಡಪ್ಪ ವರದಿಯ ಅನುಷ್ಠಾನದ ಕುರಿತು ಅವರ ಕಲ್ಪನೆ, ಬೆಳಗಾವಿಯ ಗಡಿ ಸಮಸ್ಯೆ ಪರಿಹಾರ, ಕರ್ನಾಟಕಕ್ಕೆ ಮಳೆ ಬರಬೇಕಾದರೆ ಕಪ್ಪತಗುಡ್ಡದ ಸಂರಕ್ಷಣೆಯ ಕುರಿತು ಅವರ ಶ್ರಮ ಇವೆಲ್ಲವೂ ಸ್ಮರಣೀಯವಾದುದಾಗಿದೆ. ಸಾಮಾನ್ಯ ಜನರ ನಡುವಿನ ಬಸವಣ್ಣನನ್ನು ಕಳೆದುಕೊಂಡಿದ್ದೇವೆ ಎಂದು ತಾವು ಹೇಳಿರುವುದಕ್ಕೆ ನನ್ನ ಅನುಮೋದನೆಯಿದೆ.

ದಿವಂಗತ ಡಾ:ಸುಮತೀಂದ್ರ ನಾಡಿಗ ಇವರು ಕಾವ್ಯ, ಕಥನ, ಮಕ್ಕಳ ಸಾಹಿತ್ಯ, ವಿಮರ್ಶೆ ಈ ರೀತಿಯಾಗಿ ವಿವಿಧ ರಂಗಗಳಲ್ಲಿ ಅಪಾರ ಕೊಡುಗೆಯನ್ನು ನೀಡಿರುತ್ತಾರೆ.

ದಿವಂಗತ ಜ.ಹೊ.ನಾರಾಯಣಸ್ವಾಮಿಯವರು ಶ್ರೇಷ್ಠ ಸಾಹಿತಿಯಾಗಿದ್ದು, ವಿವೇಕಾನಂದರ ಕ್ರಾಂತಿಕಾರಕ ವಿಚಾರಗಳನ್ನು ಹಾಗೂ ಏಕಲವ್ಯನ ಕಥೆಗಳನ್ನಾಧರಿಸಿದ ಅದಮ್ಯ ಕಾದಂಬರಿಗಳು ಅವರ ಪ್ರಸಿದ್ಧತೆಯನ್ನು ಒತ್ತಿ ಹೇಳುತ್ತವೆ.

ಒಟ್ಟಾರೆ ಈ ಅಗಲಿಕೆಯ ಜನರ ಸಾವಿನ ನೋವನ್ನು ಭರಿಸುವ ಶಕ್ತಿಯನ್ನು ಈ ರಾಷ್ಟ್ರದ ಹಾಗೂ ಈ ರಾಜ್ಯದ ಜನತೆಗೆ ನೀಡಲಿ. ಭಗವಂತನು ಅವರ ಕುಟುಂಬ ವರ್ಗದವರು, ಬಂಧು ಬಾಂಧವರಿಗೆ ಆ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ. ದೇವರು ಅವರಿಗೆ ಸದ್ಗತಿಯನ್ನು ಕೊಡಲಿ ಎಂದು ತಾವು ಮಂಡಿಸಿರುವ ಶ್ರದ್ಧಾಂಜಲಿಗೆ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಸದನದ ಕಲಾಪದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಶ್ರೀ ವಾಜಪೇಯಿಯವರ ಜೊತೆಯಲ್ಲಿ ಕೆಲಸ ಮಾಡಿರುವವರು ಈ ರೀತಿ ಒಂದು ನಾಲ್ಕು ಜನ ಸದಸ್ಯರಿಗೆ ತಮ್ಮ ಭಾವನೆಗಳನ್ನು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಲ್ಲಿ ಅದು ನಿಜಕ್ಕೂ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎನ್ನುವುದು ನನ್ನ ಅನಿಸಿಕೆ. ಆದರೆ ಅಂತಿಮ ನಿರ್ಣಯ ತಮ್ಮ ವಿವೇಚನೆಗೆ ಬಿಟ್ಟಿರತಕ್ಕಂತಹ ವಿಚಾರ.

**ಸಭಾಪತಿಯವರು:–** ಇದು ಹಿಂದಿನ ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ನಡೆದ ವಿಷಯವಾಗಿದ್ದು, ಅದೇ ಪರಂಪರೆ ಮುಂದುವರೆದಿದೆ. ಅದೇ ಪರಂಪರೆಯನ್ನು ಮುಂದುವರೆಸಲಾಗಿದೆ. ನಾಳೆ ಅಥವಾ ನಾಡಿದ್ದು ನಡೆಯಲಿರುವ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ತಮ್ಮ ಸಲಹೆಯನ್ನು ನಾನೂ ಸಹಿತ ಗೌರವಿಸುತ್ತೇನೆ. ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

**(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆಯನ್ನು ಮಾಡುವ ಮೂಲಕ ಅಗಲಿದ ಗಣ್ಯರ ಆತ್ಮಕ್ಕೆ ಶಾಂತಿಯನ್ನು ಕೋರಿತು)**

**ಸಭಾಪತಿಯವರು:–** ಸದನದಲ್ಲಿ ಕೈಗೊಂಡ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಗಣ್ಯರ ಕುಟುಂಬ ವರ್ಗಕ್ಕೆ ಕಳುಹಿಸಿಕೊಡಲಾಗುವುದು.

## 2. ನೂತನ ಸದಸ್ಯರ ಪರಿಚಯ

**ಸಭಾಪತಿಯವರು:–** ನೂತನವಾಗಿ ಆಯ್ಕೆಯಾಗಿರುವ ಸದಸ್ಯರು ಇಂದು ಮೊದಲ ಬಾರಿಗೆ ಸದನವನ್ನು ಪ್ರವೇಶಿಸಿದ್ದಾರೆ. ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡಲು ಬಯಸುತ್ತೇನೆ.

1. ಶ್ರೀ ಸುನಿಲಗೌಡ ಬಸನಗೌಡ ಪಾಟೀಲ್
2. ಶ್ರೀ ನಜೀರ್ ಅಹಮದ್
3. ಶ್ರೀ ಎಂ.ಸಿ.ವೇಣುಗೋಪಾಲ್
4. ಶ್ರೀ ಹೆಚ್.ಎಂ.ರಮೇಶ್ ಗೌಡ
5. ಶ್ರೀ ಯು.ಬಿ.ವೆಂಕಟೇಶ್
6. ಶ್ರೀ ಪ್ರಕಾಶ್ ಸಿ.ರಾಥೋಡ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಲ್ಲಾ ಮಾನ್ಯ ಸದಸ್ಯರಿಗೆ ಸದನಕ್ಕೆ ಸ್ವಾಗತವನ್ನು ಬಯಸುತ್ತೇನೆ.

**(ಈ ಹಂತದಲ್ಲಿ ನೂತನ ಸದಸ್ಯರು ಎದ್ದು ನಿಂತು ಸದನಕ್ಕೆ ತಮ್ಮ ಪರಿಚಯವನ್ನು ಮಾಡಿಕೊಂಡರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಈಗಾಗಲೇ ಹಾಲಿ ಕೇಂದ್ರ ಸಚಿವರು, ಮಾಜಿ ಪ್ರಧಾನಿಗಳು ಈ ರೀತಿ ಹಲವು ಗಣ್ಯ ವ್ಯಕ್ತಿಗಳು ನಿಧನರಾಗಿದ್ದು, ಇಂತಹ ಮಾನಸಿಕತೆಯಲ್ಲಿ ಸದನದಲ್ಲಿ ಭಾಗವಹಿಸುವುದು ಕಷ್ಟವಾಗುವುದರಿಂದ ದಯವಿಟ್ಟು ಇಂದಿನ ಕಾರ್ಯಕಲಾಪವನ್ನು ಮುಂದೂಡಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇವೆ. ಕೆಳಮನೆಯ ಸಭಾಧ್ಯಕ್ಷರಿಗೂ ಸಹ ನಮ್ಮ ಪಕ್ಷದ ವತಿಯಿಂದ ವಿನಂತಿಯನ್ನು ಮಾಡಿಕೊಂಡಿದ್ದೇವೆ. ನಾಳೆ ಒಂದು ಗಂಟೆ ಮುಂಚಿತವಾಗಿ ಸದನವನ್ನು ಪ್ರಾರಂಭಿಸಬೇಕೆಂದು ನಮ್ಮ ವಿನಂತಿ.

**ಸಭಾಪತಿಯವರು:–** ಹಲವು ಮಹಾನ್ ನಾಯಕರು ನಮ್ಮ ದೇಶವನ್ನು ಹಾಗೂ ರಾಜ್ಯವನ್ನು ಬಿಟ್ಟು ಅಗಲಿದ್ದಾರೆ. ದಿವಂಗತ ಶ್ರೀ ವಾಜಪೇಯಿಯವರ ನಿಧನದ ಸಂದರ್ಭದಲ್ಲಿ ಏಳು ದಿನಗಳ ಶೋಕಾಚರಣೆಯನ್ನು ರಾಷ್ಟ್ರಾದ್ಯಂತ ಮಾಡಲಾಗಿದೆ. ದಿವಂಗತ ಶ್ರೀ ಅನಂತಕುಮಾರ್ ಅವರ ನಿಧನದ ಸಂದರ್ಭದಲ್ಲಿ ಮೂರು ದಿನಗಳ ಶೋಕಾಚರಣೆಯನ್ನು ಮಾಡಲಾಗಿದೆ. ದಿವಂಗತ ಶ್ರೀ ಅಂಬರೀಷ್ ಅವರ ನಿಧನದ ಸಂದರ್ಭದಲ್ಲಿಯೂ ಸಹ ಶೋಕಾಚರಣೆಯನ್ನು ಮಾಡಲಾಗಿದೆ. ಇಂದು ಪಟ್ಟಿಯಾಗಿರುವ ಎಲ್ಲಾ ಹದಿನೈದೂ ಪ್ರಶ್ನೆಗಳಿಗೆ ಉತ್ತರವನ್ನು ನೀಡಲಾಗಿದೆ. ಉತ್ತರಿಸಬೇಕಾದ ಎಲ್ಲಾ ಸಚಿವರು ಬಂದಿದ್ದಾರೆ. ಬೆಳಗಾವಿಯಲ್ಲಿ ಕೇವಲ ಹತ್ತು ದಿನಗಳಷ್ಟೇ ಅಧಿವೇಶನ ನಡೆಯುತ್ತದೆ. ಇಂತಹ ಮಹಾನ್ ವ್ಯಕ್ತಿಗಳ ನಿಧನದ ಸಂದರ್ಭದಲ್ಲಿ ಹೆಚ್ಚು ಕೆಲಸ ಮಾಡಿ ಅವರಿಗೆ ಗೌರವ ಸೂಚಿಸಬೇಕೆಂಬುದು ಬಹಳಷ್ಟು ಜನರ ಅಭಿಪ್ರಾಯ. ಇಂದು ಸದನವನ್ನು ಮುಂದೂಡಿದರೂ ಬೆಳಗಾವಿಯನ್ನು ಬಿಟ್ಟು ಎಲ್ಲಿಯೂ ಹೋಗುವುದಕ್ಕಾಗುವುದಿಲ್ಲ. ಸದನವನ್ನು ಮುಂದೂಡುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಮಾನ್ಯ ಸದಸ್ಯರು ವಿಚಾರ ಮಾಡಬೇಕು. ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಸದನವು ಏನು ತೀರ್ಮಾನ ಕೈಗೊಳ್ಳುತ್ತದೆಯೋ, ಅದರಂತೆ ನಾನು ನಡೆದುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾವುದೇ ವಾದ ಅಥವಾ ಚರ್ಚೆಗೋಸ್ಕರ ಇದನ್ನು ಹೇಳಿರುವುದಿಲ್ಲ. ವಾಸ್ತವಿಕ ವಿಚಾರವನ್ನು ತಮಗೆ ಮನವರಿಕೆ ಮಾಡುವುದು ನಮ್ಮ ಉದ್ದೇಶ. ಬೇರೆ ದೇಶಗಳಲ್ಲಿ ಗಣ್ಯವ್ಯಕ್ತಿಗಳು ನಿಧನರಾದರೆ ಒಂದು ಗಂಟೆ ಹೆಚ್ಚು ಸಮಯ ಕೆಲಸ ಮಾಡುವ ಸಂಪ್ರದಾಯವಿದೆ. ನಮ್ಮಲ್ಲಿ ಆ ಸಂಪ್ರದಾಯ ಇನ್ನೂ ಪ್ರಾರಂಭವಾಗಿರುವುದಿಲ್ಲ. ಅದು ಇಲ್ಲಿಯೂ ಬರಲಿ ಎಂದು ನಾವು ಆಶಿಸುತ್ತೇವೆ. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೆಂಬ ಎಲ್ಲರ ಆಶಯದ ಬಗ್ಗೆ ನಿಮಗೆ ನಮ್ಮ ಪೂರ್ಣ ಸಹಕಾರವಿದೆ. ಆದರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಂದಿನ ಮಾನಸಿಕ ಸ್ಥಿತಿಯಲ್ಲಿ ಕೆಲಸ ಮಾಡುವುದು ಕಷ್ಟವಾದುದರಿಂದ ನಾಳೆ ಒಂದು ಗಂಟೆ ಮೊದಲೇ ಸದನ ಸೇರುವ ಬಗ್ಗೆ ತಮ್ಮಲ್ಲಿ ಅತ್ಯಂತ ವಿನೀತನಾಗಿ ವಿನಂತಿ ಮಾಡಿಕೊಂಡು ಇಂದಿನ ಕಾರ್ಯಕಲಾಪವನ್ನು ಮುಂದೂಡಬೇಕೆಂದು ವಿನಂತಿಸುತ್ತೇನೆ. ತಮ್ಮ ಭಾವನೆಯನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಇಂದಿನ ಅಜೆಂಡಾವನ್ನು ಬೇರೆ ದಿನಕ್ಕೆ ಸರಿ ಹೊಂದಿಸಿಕೊಳ್ಳೋಣ. ದಯವಿಟ್ಟು ಈ ವಿಚಾರದಲ್ಲಿ ಚರ್ಚೆ ಮಾಡದೆ ವಿನಾಯ್ತಿ ಕೊಡಬೇಕೆಂದು ಅತ್ಯಂತ ವಿನಮ್ರವಾಗಿ ಪ್ರಾರ್ಥನೆ ಮಾಡುತ್ತೇವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರ ಮಾತನ್ನು ನಾವು ಗೌರವಿಸುತ್ತೇವೆ. ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡಲು ತಾವು ಹೇಳಿದಂತೆ ಎಲ್ಲಾ ಸಚಿವರು ಬಂದಿದ್ದಾರೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಮೂಲಕ ಅಗಲಿದ ಗಣ್ಯರಿಗೆ ಗೌರವವನ್ನು ಸಲ್ಲಿಸಬಹುದು ಎಂಬುದು ನನ್ನ ಭಾವನೆ. ಆದರೆ ಈ ವಿಚಾರದಲ್ಲಿ ಅಂತಿಮ ನಿರ್ಣಯವನ್ನು ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ.

(...ಮುಂದು)

(321) 10.12.2018 (1–40) ಕೆಜಿ–ಎಕೆ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಕೇವಲ 10 ದಿವಸಗಳ ಕಾಲ ಮಾತ್ರ ಅಧಿವೇಶನ ನಡೆಯುತ್ತದೆ. ಈ ಭಾಗದಲ್ಲಿ ಸದನ ನಡೆಸಿಬಿಟ್ಟು ಈಗ ತಾವು ಒಂದೊಂದು ಕಾರಣಕ್ಕೆ ಸದನವನ್ನು ಮುಂದೂಡುವುದಾದರೆ ಸದನವನ್ನು ಒಂದು ದಿವಸ extend ಮಾಡಬೇಕು. ದಿನಾಂಕ:21.12.2018ಕ್ಕೆ ಸದನ ಮುಗಿಯುತ್ತದೆ. ಆದ್ದರಿಂದ ದಿನಾಂಕ:22.12.2018 ರವರೆಗೆ ಸದನವನ್ನು ನಡೆಸುವುದಕ್ಕೆ ಚಿಂತನೆ ಮಾಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನವನ್ನು ಪ್ರತಿ ದಿವಸ ಒಂದು ಗಂಟೆಯ ಕಾಲ ಹೆಚ್ಚಿಗೆ ನಡೆಸುವುದಕ್ಕೆ ನಮ್ಮ ಅಭ್ಯಂತರವಿಲ್ಲ. ನಮ್ಮ ನಾಡಿನ ಪರಂಪರೆ, ನಮ್ಮ ನಾಡಿನ ಸಂಸ್ಕೃತಿ ಮತ್ತು ನಮ್ಮ ನಾಡಿನ ಇತಿಹಾಸ ಬಹಳ ದೊಡ್ಡದು. ಏಕೆಂದರೆ, ಇವತ್ತು ಈ ಸದನ ನಡೆಯುವ ವೇಳೆಯಲ್ಲಿ ಈ ಸದನದ ಸದಸ್ಯರು ಯಾರಾದರೂ ಮೃತಪಟ್ಟರೆ ಸದನವನ್ನು adjourn ಮಾಡುತ್ತೇವೆ. ನಾವು ಸದನವನ್ನು adjourn ಮಾಡಿದ ಮೇಲೆ ಎಲ್ಲಿಗೂ ಹೋಗುವಂತಿಲ್ಲ. ಬೆಳಗಾವಿಯಲ್ಲಿಯೇ ಇರುತ್ತೇವೆ. ಈ ದೇಶದ ಮಾಜಿ ಪ್ರಧಾನ ಮಂತ್ರಿಗಳು ಮರಣ ಹೊಂದಿರುತ್ತಾರೆ. ನಮ್ಮ ದೇಶ ಅವರಿಗೆ ಕಂಬನಿ ಸುರಿಸಿದೆ. ನಮ್ಮ ರಾಜ್ಯದ ಜನರು ತೋರಿಸಿರುವಂತಹ ಭಾವನೆಗಳು ನಮ್ಮ ದೇಶಕ್ಕೆ ಮಾದರಿಯಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಇಬ್ರಾಹಿಂರವರೇ, ತಮ್ಮ ಅಭಿಪ್ರಾಯ ಏನೆಂದು ಗೊತ್ತಾಗಲಿಲ್ಲ. ತಾವು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಅಡ್ಡಗೋಡೆ ಮೇಲೆ ದೀಪ ಇಟ್ಟಂತಿಟ್ಟಿದ್ದೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇವತ್ತಿನ ಕಲಾಪವನ್ನು adjourn ಮಾಡಿ ನಾಳೆ ಬೆಳಿಗ್ಗೆ ಒಂದು ಗಂಟೆ ಮುಂಚೆ ಪ್ರಾರಂಭ ಮಾಡಬಹುದೆಂಬುದು ನಮ್ಮ ಸಲಹೆಯಾಗಿದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅನೇಕ ಗೊಂದಲದ ಪ್ರಶ್ನೆಗಳು ಇವೆ. ಅದರಲ್ಲಿ ನನ್ನ ಒಂದು ಪ್ರಶ್ನೆ ಇದೆ. ಬಹುಶಃ ಇವತ್ತು ಬಿಟ್ಟರೆ ಮತ್ತೆ ಆ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಆದ್ದರಿಂದ, ಇಂದಿನ ಕಾರ್ಯಕಲಾಪಗಳನ್ನು ನಡೆಸಬೇಕೆಂದು ನಾನು ತಮ್ಮನ್ನು ಕೋರಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಎಲ್ಲಾ ಗೌರವಾನ್ವಿತ ಸದಸ್ಯರು ಸದನವನ್ನು adjourn ಮಾಡಬೇಕೆಂಬ ನಿಟ್ಟಿನಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಬಹಳ ಒಳ್ಳೆಯ ಪ್ರಶ್ನೆಗಳು ಬಂದಿವೆ. ಅದರಲ್ಲಿಯೂ ವಿಶೇಷವಾಗಿ ನಿಯಮ 330 ರಡಿಯಲ್ಲಿ ಮಾನ್ಯ ಹಿರಿಯ ಸದಸ್ಯರಾದ ಕೊಂಡಯ್ಯನವರು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ನನ್ನ ಪ್ರಶ್ನೆಯು ಸಹ ಇದೆ. ಅದು ಬಹಳ ಮುಖ್ಯವಾದಂತಹ issue. ಅದರ ಬಗ್ಗೆ debate ಆಗಲೇಬೇಕಾಗಿದೆ. ಅದನ್ನು ನಾಳೆ ತೆಗೆದುಕೊಳ್ಳುವುದಾದರೆ, ಅದನ್ನು ನಾಳೆ ಕಡ್ಡಾಯವಾಗಿ ಪಟ್ಟಿಗೆ ಹಾಕಿಕೊಳ್ಳಿ. ಇಲ್ಲವೆಂದರೆ, ನಾಳಿದ್ದು ನಮಗೆ ಸಮಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ನಿಧನರಾಗಿರುವುದರಿಂದ ಸದನದ ಇಂದಿನ ಕಲಾಪವನ್ನು adjourn ಮಾಡುವುದಕ್ಕೆ ನಮ್ಮ ತಕರಾರೇನೂ ಇಲ್ಲ. ಆದರೆ, ಇವತ್ತಿನ ಪೂರ್ತಿ ಕಾರ್ಯಕಲಾಪವನ್ನು ನಾಳೆ ತೆಗೆದುಕೊಂಡು ಸದನವನ್ನು adjourn ಮಾಡಬಹುದು ಎಂಬುದು ನನ್ನ ಭಾವನೆ, ಏಕೆಂದರೆ, ಎಲ್ಲವೂ ಸಹ ಬಹಳ ಮುಖ್ಯವಾಗಿವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಇದನ್ನು ಚರ್ಚೆ ಮಾಡಬೇಕಾಗುತ್ತದೆ. ಈಗ ಸದನವನ್ನು ಹತ್ತು ನಿಮಿಷಗಳ ಕಾಲ adjourn ಮಾಡಿ ನನ್ನ ಕಛೇರಿಯಲ್ಲಿ ಚರ್ಚೆ ಮಾಡಿ ಮತ್ತೆ ಸದನವನ್ನು ಪ್ರಾರಂಭಿಸೋಣ. ಇಲ್ಲಿ ಬಹುಮತವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

**ಡಾ.ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ದಯವಿಟ್ಟು ಬಹುಮತ ಬೇಡ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನನ್ನ ಮಾತು ಕೇಳಿ. ಇಲ್ಲಿ ಮತ ಹಾಕುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಐದು ನಿಮಿಷಗಳ ಕಾಲ ಚರ್ಚೆ ಮಾಡೋಣ. ಕೆಲವು ವಿಚಾರಗಳಲ್ಲಿ ಒಮ್ಮತ ಇಲ್ಲ, ಆದ್ದರಿಂದ ಚರ್ಚೆ ಮಾಡಿ ಬರೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸದನಕ್ಕೆ ಹಾಜರಾಗಿದ್ದೇವೆ. ತಾವು ಏನಾದರೂ ತೀರ್ಮಾನ ಮಾಡಿ, ದಯವಿಟ್ಟು ಇಂದಿನ ಕಲಾಪವನ್ನು ಮುಂದುವರೆಸಬೇಡಿ ಎಂಬುದು ನನ್ನ ವಿನಂತಿ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಮ್ಮತದ ನಿರ್ಣಯ ಆಗಲಿ. ನಾವು ಹೇಳುವುದು ಹೇಳಿದ್ದೇವೆ. ನಮ್ಮ ಆಸೆ ಅಗಲಿದವರಿಗೆ ಗೌರವವನ್ನು ಸಲ್ಲಿಸೋಣ ಎನ್ನುವುದಾಗಿದೆ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದಕ್ಕೆ ಚರ್ಚೆ ಬೇಡ. ನಿಮಗೆ ಕೈ ಮುಗಿಯುತ್ತೇನೆ. ತಾವು ಬೇಡವೆಂದರೆ ಬೇಡ. ಅದಕ್ಕೆ ನಮ್ಮ ತಕರಾರು ಇಲ್ಲ. ತಾವು ತಮ್ಮ ಅಭಿಪ್ರಾಯವನ್ನು ಹೇಳಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ, ಯಾರಾದರೂ ಒಬ್ಬರು ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ವಾಜಪೇಯಿಯವರು ನಿಧನರಾದಾಗ ಅವರ ಗೌರವಾರ್ಥವಾಗಿ ಸರ್ಕಾರ ರಜೆ ಸಹ ಘೋಷಣೆ ಮಾಡಿತ್ತು. ನಾವು ಹೆಚ್ಚು ಕೆಲಸ ಮಾಡುವುದರಿಂದ ಅವರಿಗೆ ಹೆಚ್ಚು ಗೌರವ ಕೊಟ್ಟಂತೆ ಆಗುತ್ತದೆ. ಆ ವಿಚಾರಕ್ಕೆ ತಾವು ಒತ್ತು ಕೊಡುತ್ತೀರಿ ಎಂಬುದು ನನ್ನ ಭಾವನೆ. ದಯಮಾಡಿ ತಾವು ಅದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ವಿನಂತಿಸುತ್ತಿದ್ದೇನೆ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಬಹಳ ಸಮಯ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ. ನಾಳೆ ಬೆಳಿಗ್ಗೆ ಒಂದು ಗಂಟೆಯ ಕಾಲ ಬೇಗ ಸದನವನ್ನು ಪ್ರಾರಂಭಿಸಿ ರಾತ್ರಿ 8.00 ಗಂಟೆಯವರೆಗೆ ನಡೆಸುವುದಾದರೆ, ಆ ವಿಚಾರದಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಬಹಳ ದೊಡ್ಡ ಮೇರು ವ್ಯಕ್ತಿಯಾಗಿದ್ದವರು. ನಾವು ಈಗಾಗಲೇ ಅವರ ಬಗ್ಗೆ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೇವೆ. ಅದಕ್ಕೆ ಮಾನ್ಯ ಜಾಫರ್ ಶರೀಫ್‌ರವರು ಸಹ ಸೇರಿಕೊಳ್ಳುತ್ತಾರೆ. ಇಲ್ಲಿ ಚರ್ಚೆ ಮಾಡಿ ಬಹುಮತ ತೆಗೆದುಕೊಳ್ಳುವುದು ಬೇಡ. ಸಹಮತದೊಂದಿಗೆ ಗೌರವದಿಂದ ಮತ್ತು ಪ್ರೀತಿಯಿಂದ ಸದನದ ಇಂದಿನ ಕಲಾಪವನ್ನು ದಯಮಾಡಿ adjourn ಮಾಡಬೇಕೆದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದಲ್ಲಿ ಚರ್ಚೆ ಆಗಬೇಕೆಂದು ಹೇಳುತ್ತಿಲ್ಲ. ಮಹಾನ್ ನಾಯಕರ ನಿಧನದಿಂದ ನೋವಾಗಿರುವಂಥದ್ದರಲ್ಲಿ ಎರಡು ಮಾತಿಲ್ಲ. ನಮ್ಮ ಭಾರತ ದೇಶದ ಸಂಪ್ರದಾಯ ಬೇರೆ ಇದೆ. ಆದರೆ, ಹೊರದೇಶಗಳಾದ ಅಮೆರಿಕಾ ಇರಬಹುದು ಅಥವಾ ಇಂಗ್ಲೆಂಡ್ ಇರಬಹುದು, ಅಲ್ಲಿ ಕೆಲಸ ಮಾಡುವಂತಹ ಅಧ್ಯಕ್ಷರು, ಮಹಾರಾಜರು ಅಥವಾ ಮಹಾರಾಣಿಯವರು ನಿಧನ ಹೊಂದಿದ್ದ ಸಂದರ್ಭದಲ್ಲಿಯೂ ಸಹ ರಜೆ ಘೋಷಣೆ ಮಾಡದೆ ಇರುವಂಥದ್ದು ಇದೆ. ಏಕೆಂದರೆ, ಆ ದಿವಸವನ್ನು ರಜಾ ದಿನವನ್ನಾಗಿ ಘೋಷಣೆ ಮಾಡಿದರೆ ಜನರ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದೆಂಬ ನಿಟ್ಟಿನಲ್ಲಿ ಆ ದಿವಸ ಕೆಲಸ ಮಾಡಿ ಅವರ ಸಾವಿಗೆ ಗೌರವವನ್ನು ಸಮರ್ಪಣೆ ಮಾಡುವಂಥದ್ದನ್ನು ನಾವೆಲ್ಲರೂ ಕೇಳಿದ್ದೇವೆ ಮತ್ತು ನೋಡಿದ್ದೇವೆ. ಹಾಗಾಗಿ, ಇಂಗ್ಲೆಂಡಿನ ಮಹಾರಾಣಿಯವರು ಸತ್ತಾಗಲೂ ಸಹ ಅವರ ಮೊಮ್ಮಗನ ಶಾಲೆಗೆ ರಜೆ ಕೊಟ್ಟಿರಲಿಲ್ಲ. ಅವರ ಅಜ್ಜಿಯ ಶವ ಮೆರಮಣಿಗೆ ಹೋಗುವಾಗ ದಾರಿಯಲ್ಲಿ ನಿಂತು ಆ ಬಾಲಕ ತನ್ನ ಅಜ್ಜಿಯ ಪಾರ್ಥಿವ ಶರೀರದ ದರ್ಶನ ಮಾಡಿರುವಂತಹ ನಿದರ್ಶನ ಇದೆ. ಸನ್ಮಾನ್ಯ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ದೇಶಕ್ಕೆ ಸಮರ್ಪಣೆ ಮಾಡಿರುವಂತಹ ಅನೇಕ ಸಮಾಜ ಕಲ್ಯಾಣ ಕೆಲಸ ಕಾರ್ಯಗಳಿಗೆ ನಾವು ಇವತ್ತು ಕೆಲಸ ಮಾಡುವುದರ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರು ಮಾಡಿರುವಂತಹ ಕೆಲಸಗಳನ್ನು ಎತ್ತಿಹಿಡಿಯಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ಸಂತಾಪ ಸೂಚನೆಗಳು ಮಂಡನೆಯಾಗಿವೆ. ಹಾಗಾಗಿ, ಈಗ ಸದನದ ಕಲಾಪವನ್ನು adjourn ಮಾಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಚರ್ಚೆ ಮಾಡಿದರೆ ಎಲ್ಲೋ ಒಂದು ಕಡೆ ಅದು–ಇದು ಎಂದು ಅಭಿಪ್ರಾಯ ಬೇಧಗಳು ಬರುತ್ತವೆ. ಆ ರೀತಿ ಬರುವುದಕ್ಕಿಂತ ಮೊದಲೇ ತಾವು ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಈಗ ಕೆಳಮನೆಯಲ್ಲಿ ಸದನದ ಕಲಾಪವನ್ನು adjourn ಮಾಡುವುದು ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸದನವನ್ನು ಆ ರೀತಿ adjourn ಮಾಡುವುದು ಒಳ್ಳೆಯದು. ಇಲ್ಲಿ ನಾವು ನಮ್ಮ ಕೆಲಸಗಳನ್ನು ಮಾಡಲೇಬೇಕು. ನಮ್ಮ ಕೆಲಸಗಳನ್ನು ಇನ್ನೊಮ್ಮೆ ಜೋಡಿಸಿಕೊಂಡು ಈ ಕಾರ್ಯಕಲಾಪ ಪಟ್ಟಿಯನ್ನು ಮತ್ತೆ ಮುಂದುವರಿಸಿ ಪ್ರತಿ ದಿನ ಒಂದು ಗಂಟೆ ಅಥವಾ ಎರಡು ಗಂಟೆಗಳ ಕಾಲ ಹೆಚ್ಚಿಗೆ ಸದನದ ಕಲಾಪದಲ್ಲಿ ಭಾಗವಹಿಸೋಣ. ತಾವು ಯಾವಾಗಲೂ ಕಾರ್ಯಕಲಾಪ ಪಟ್ಟಿಯನ್ನು ಮುಗಿಸದೆ ಯಾವತ್ತು ಸದನವನ್ನು adjourn ಮಾಡಿರುವುದಿಲ್ಲ. ಆದ್ದರಿಂದ, ಈ ಕಾರ್ಯಕಲಾಪ ಪಟ್ಟಿಯನ್ನು ಮತ್ತೊಂದು ದಿವಸಕ್ಕೆ ತೆಗೆದುಕೊಂಡು ಹೋಗಬಹುದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:–** ಸದನವನ್ನು ಮುಂದೂಡಬೇಕೇ, ಬೇಡವೇ ಎನ್ನುವ ವಿಚಾರದಲ್ಲಿ ಸರ್ಕಾರದ ನಿಲುವು ಏನೆಂಬುದನ್ನು ಸರ್ಕಾರದ ವತಿಯಿಂದ ಸ್ಪಷ್ಟವಾಗಿ ತಿಳಿಸಿಬಿಡಿ.

**ಶ್ರಿ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ಅಗಲಿದಂತಹ ಎಲ್ಲಾ ಗಣ್ಯರಿಗೆ ವಿಧಾನ ಸಭೆಯಲ್ಲಿ ಸಂತಾಪವನ್ನು ಸೂಚಿಸಿದ್ದೇನೆ. ಈ ಸದನದ ಮೂಲಕ ಮತ್ತೊಮ್ಮೆ ಆಗಲಿದ ನಾಯಕರಿಗೆ ಸಂತಾಪವನ್ನು ಸಲ್ಲಿಸುತ್ತೇನೆ. ಈಗ ಚರ್ಚೆ ನಡೆಯುತ್ತಿದೆ. ಇನ್ನೂ ಬಾಕಿ ಇರುವಂತಹ ಕಾರ್ಯಕಲಾಪಗಳನ್ನು ನಡೆಸಬೇಕೆ ಅಥವಾ ಇವತ್ತಿನ ಕಾರ್ಯಕಲಾಪಗಳನ್ನು ಇಲ್ಲಿಗೆ ಸ್ಥಗಿತಗೊಳಿಸಬೇಕೆ ಎನ್ನುವುದರ ಬಗ್ಗೆ ಮತ್ತು ಎಲ್ಲಾ ಹಿರಿಯರಿಗೆ ಗೌರವ, ಅದರಲ್ಲೂ ವಿಶೇಷವಾಗಿ ನಮ್ಮ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಗೌರವ ಸಲ್ಲಿಸಿ ಇಂದಿನ ಸದನದ ಕಲಾಪವನ್ನು ಇಲ್ಲಿಗೆ ಮೊಟಕುಗೊಳಿಸಿ ನಾಳೆ ಸೇರುವ ವಿಷಯದ ಬಗ್ಗೆ ಅನೇಕ ಪ್ರತಿಪಕ್ಷದ ನಾಯಕರು ತಮ್ಮ ಮುಂದೆ ಮನವಿ ಇಟ್ಟಿದ್ದಾರೆಂದು ಭಾವಿಸಿಕೊಳ್ಳುತ್ತೇನೆ. ಇದರಲ್ಲಿ ಎರಡು ವಾದಗಳು ಇವೆ. ಬಹುಶಃ ಮಾನ್ಯ ಸದಸ್ಯರಾದ ಭೋಜೇಗೌಡರವರು ಅವರ ಹೆಸರಿನಲ್ಲಿ ಹೆಚ್ಚಿಗೆ ಕೆಲಸ ಮಾಡಿದರೆ ನಾವು ನಿಜವಾಗಿಯೂ ಅವರಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವೇ ನನ್ನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವೈಯಕ್ತಿಕ ಅಭಿಪ್ರಾಯವೂ ಆಗಿದೆ. ನಮ್ಮನ್ನು ಜನ ಇಲ್ಲಿ ಕುಳ್ಳಿರಿಸಿರುವುದು ಕೆಲಸ ಮಾಡುವುದಕ್ಕೆ. ಆದರೆ, ಕೆಲವು ಸಂದರ್ಭಗಳಲ್ಲಿ ವಾಡಿಕೆಯಾಗಿ ಬಂದುಬಿಟ್ಟಿದೆ, ನಾನಾ ರೀತಿಯ ಜಯಂತಿಗಳ ಮೂಲಕ ಅವು–ಇವು ಎಂದು ಈಗಾಗಲೇ ಕೆಲಸ ಮಾಡುವಂತಹ ದಿವಸಗಳೇ ಕಡಿಮೆ ಆಗಿರುವಂಥದ್ದು ಇದ್ದು, ಆ ಹಿನ್ನೆಲೆಯಿಂದ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ವೈಯಕ್ತಿಕವಾಗಿ ಒಪ್ಪುವಂತಹ ವಿಚಾರ. ಆದಾಗ್ಯೂ ಸಹ ಇವತ್ತು ಮಾನ್ಯ ವಾಜಪೇಯಿಯವರ ವಿಚಾರದಲ್ಲಿ ಪ್ರತಿಪಕ್ಷದವರು ಹೇಳುತ್ತಾರೆ, ಅದಕ್ಕೆ ನಾವು ಸರ್ಕಾರದಿಂದ ಒಪ್ಪುವುದಿಲ್ಲ. ಈ ರೀತಿಯಾಗಿ ಯಾವುದೇ ಕಾರಣಕ್ಕೂ ನಾವು ಈ ಸಂದರ್ಭದಲ್ಲಿ ಈ ವಿಚಾರದಲ್ಲಿ ಅಂತಹ ಅಭಿಪ್ರಾಯಗಳನ್ನು ಮೂಡಿಸಲಿಕ್ಕೆ ಅವಕಾಶ ಕಲ್ಪಿಸುವುದರಲ್ಲಿ ನಮಗೆ ಆಸಕ್ತಿ ಇಲ್ಲ. ಕೆಲವು ಶಾಸಕರು ಸದನವನ್ನು ನಡೆಸೋಣವೆಂದು ಹೇಳುತ್ತಿದ್ದಾರೆ. ನಾವು ಅವರ ಅಭಿಪ್ರಾಯವನ್ನು ಗೌರವಿಸುತ್ತೇವೆ. ಆದರೆ, ಸರ್ಕಾರದ ಕಡೆಯಿಂದ ಈ ಸದನದ ಒಟ್ಟು ಅಭಿಪ್ರಾಯ ಹಿರಿಯರ ಗೌರವಾರ್ಥ ಇಂದಿನ ಅಧಿವೇಶನದ ಕಲಾಪವನ್ನು ಮುಂದೂಡಿದ ಮಾತ್ರಕ್ಕೆ ಅದು ರಜೆ ಎಂದು ಪರಿಗಣಿಸಲ್ಪಡುವುದಿಲ್ಲ. ಏಕೆಂದರೆ ಇವತ್ತು ಈಗಾಗಲೇ ಸದನದ ಕಲಾಪ ನಡೆದಿದೆ. ಹಾಗಾಗಿ, ಇದನ್ನು ರಜೆ ಎಂದು ಭಾವಿಸುವುದಕ್ಕೆ ಆಗುವುದಿಲ್ಲ; ಇದು ರಜೆಗೆ ಸಮಾನವು ಅಲ್ಲ.

(ಮುಂದು....)

(322)10–12–2018(01–50)ಎಂವಿ–ಎಕೆ

**ಶ್ರೀ ಕೃಷ್ಣಬೈರೇಗೌಡ (ಮುಂದು):–**

ಹಾಗಾಗಿ ಈಗಾಗಲೇ ಕಲಾಪ ನಡೆದಿದೆ, ಇನ್ನು ಉಳಿದಿರುವಂತಹ ಕಲಾಪ ಸ್ವಲ್ಪ ಸ್ಥಗಿತವಾಗಬಹುದು. ಇದನ್ನು ಮಾನ್ಯ ಸಭಾಪತಿಯವರು ಹೇಗೆ ಸರಿದೂಗಿಸುತ್ತಾರೆಂದು ಅದನ್ನು ಅವರ ವಿವೇಚನೆಗೆ ಬಿಡುತ್ತೇವೆ. ಸರ್ಕಾರದ ಕಡೆಯಿಂದ ನಮ್ಮ ಅಭಿಪ್ರಾಯ ಇಷ್ಟೆ. ಇದಕ್ಕೆ ಪೂರಕವಾಗಿ ಎಲ್ಲಾ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಸಭಾಪತಿಯವರು ಇಂದಿನ ಕಲಾಪವನ್ನು ಮೊಟಕು ಮಾಡುವುದಕ್ಕೆ ತೀರ್ಮಾನಿಸುವುದಾದರೆ ಅದಕ್ಕೆ ಸರ್ಕಾರದ ಸಹಮತವಿದೆ. ಅದನ್ನು ನಮ್ಮ ಕಡೆಯಿಂದ ಒಪ್ಪುತ್ತೇವೆ. ಆದರೆ, ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಂತಹದ್ದನ್ನು ನಾವು ಮಾನ್ಯ ಸಭಾಪತಿಯವರಿಗೆ ಬಿಟ್ಟಿದ್ದೇವೆ. ಅಲ್ಲದೆ, ನಾನು ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಆ ರೀತಿಯಾದ ಬೇಡಿಕೆ ಬಂದಿದ್ದರೆ, ಅದನ್ನು ನಾವು ತಿರಸ್ಕಾರ ಮಾಡುವುದು ಬೇಡ ಎನ್ನುವಂತಹ ಅಭಿಪ್ರಾಯವನ್ನು ಹೇಳಿದ್ದಾರೆ. ಕೆಳ ಮನೆಯಲ್ಲಿ ಮಾನ್ಯ ಸಭಾಧ್ಯಕ್ಷರೂ ಇವತ್ತಿನ ಕಲಾಪವನ್ನು ಸಂತಾಪ ಸೂಚನೆಯ ನಂತರ ಮೊಟಕುಗೊಳಿಸುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂದು, ಮಾನ್ಯ ಸಭಾಪತಿಯವರ ಗಮನಕ್ಕೆ ಸಲ್ಲಿಸುತ್ತಾ, ಸರ್ಕಾರದ ಪರವಾಗಿ ಇದಕ್ಕೆ ಯಾವುದೇ ರೀತಿಯಾದ ತಕರಾರು ಇಲ್ಲ. ಆದಾಗ್ಯೂ ಇದನ್ನು ಮಾನ್ಯ ಸಭಾಪತಿಯವರ ವಿವೇಚನೆಗೆ ಬಿಡುತ್ತೇವೆ. ಅವರು ಯಾವುದೇ ರೀತಿಯ ತೀರ್ಮಾನವನ್ನು ತೆಗೆದುಕೊಂಡರು ಸಹ ನಾವು ಅದಕ್ಕೆ ಬದ್ಧರಾಗಿರುತ್ತೇವೆ. ಸದನವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಸುವಂತಹ ತೀರ್ಮಾನವನ್ನು ಮಾಡಿದರೂ ಸಹ ಸರ್ಕಾರ ಕಲಾಪವನ್ನು ನಡೆಸುವುದಕ್ಕೆ ತಯಾರಿದೆ ಅಥವಾ ಎಲ್ಲರ ಭಾವನೆಗೆ ಗೌರವ ಕೊಡುವಂಥದ್ದಾಗಿದ್ದರೆ, ನಾವು ಮಾನ್ಯ ಸಭಾಪತಿಯವರ ತೀರ್ಮಾನಕ್ಕೆ ಅಣಿಯಾಗಿರುತ್ತೇವೆ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಈಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಬಿ.ಜೆ.ಪಿ., ಪಕ್ಷದವರು, ಮಾನ್ಯ ಜಾಫರ್ ಷರೀಪ್‌ರವರು ಕಾಂಗ್ರೆಸ್ ಪಕ್ಷದವರು ಮತ್ತು ಮಾನ್ಯ ಅಂಬರೀಷ್‌ರವರು ಚಲನಚಿತ್ರ ರಂಗದವರು ಎನ್ನುವಂತಹ ಭಾವನೆ ಖಂಡಿತವಾಗಿ ಬೇಡ. ಅದರಲ್ಲೂ ನನ್ನ ಸ್ನೇಹಿತರಾಗಿದ್ದಂತಹ ಶ್ರೀ ಅಂಬರೀಷ್‌ರವರ ನಿಧನದ ಗೌರವಾರ್ಥ ಈ ದಿನದ ಸದನದ ಕಾರ್ಯಕಲಾಪವನ್ನು ಸ್ಥಗಿತಗೊಳಿಸುವುದಾದರೆ ತುಂಬಾ ಸಂತೋಷವಾಗುತ್ತದೆ. ಈಗಾಗಲೇ ಕೆಳಮನೆಯ ಕಲಾಪವನ್ನು ನಾಳೆಗೆ ಮುಂದೂಡಿರುವುದರಿಂದ ತಾವು ದಯವಿಟ್ಟು ದೊಡ್ಡಮನಸ್ಸು ಮಾಡಿ ನಮ್ಮ ಸದದ ಕಲಾಪಗಳನ್ನು ಸಹ ನಾಳೆಗೆ ಮುಂದೂಡಬೇಕೆಂಬುದು ನನ್ನ ಅನಿಸಿಕೆ.

**ಶ್ರೀ ಕೃಷ್ಣಬೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದು ರಜೆ ಅಲ್ಲವೆಂದು ಅರ್ಥ ಮಾಡಿಕೊಂಡಿದ್ದಾರೆ. ನಾನು ಸದನಕ್ಕೆ ಬಂದಾಗ ಸದಸ್ಯರಾದಂತಹ ಮಾನ್ಯ ಭೋಜೇಗೌಡರು ಮಾತನಾಡುತ್ತಿದ್ದರು. ಇನ್ನು ಬೇರೆ ಬೇರೆ ಸದಸ್ಯರ ಅಭಿಪ್ರಾಯಗಳು ಸಹ ಇದೆ. ಈಗಾಗಲೇ ಈ ವಿಚಾರವನ್ನು ಸಂಪುಟದಲ್ಲಿ ಚರ್ಚೆ ಮಾಡಿ, ಸರ್ಕಾರದಲ್ಲಿ ಕೆಲವು ರಜೆಗಳನ್ನು ಯಾವ ರೀತಿಯಾಗಿ ಕೆಲಸದ ದಿನಗಳಾಗಿ ಪರಿವರ್ತನೆ ಮಾಡಬೇಕೆಂದು ಸಚಿವ ಸಂಪುಟದ ಉಪಸಮಿತಿಯನ್ನು ರಚನೆ ಮಾಡಿದ್ದೇವೆ. ಅದರ ಪ್ರಕ್ರಿಯೆ ಸಹ ನಡೆಯುತ್ತಿದೆ. ಈ ವಿಚಾರದಲ್ಲಿ ತಮ್ಮ ಭಾವನೆಗಳಿಗೆ ಗೌರವವಿದೆ.

**ಸಭಾಪತಿಯವರು:–** ಮಾನ್ಯ ಮಂತ್ರಿಗಳೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಈಗ ಇದನ್ನು ಯಾರೂ ಸಹ ಪ್ರತಿಷ್ಠೆ ಎಂದು ತಿಳಿದುಕೊಳ್ಳಬಾರದು. ಮಾನ್ಯ ಸದಸ್ಯರೆಲ್ಲರೂ ಸಹ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಮಹಾತ್ಮರು ನಿಧನರಾದಾಗ ಹೆಚ್ಚಿನ ಕೆಲಸ ಮಾಡಬೇಕು ಎಂಬುದು ಇಡೀ ರಾಜ್ಯದ ಮತ್ತು ರಾಷ್ಟ್ರದ ಕರ್ತವ್ಯವಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯ ಸದನವನ್ನು ನಡೆಸಬೇಕೆಂಬುದು. ಆದರೆ, ಇದನ್ನು ಸರ್ಕಾರ ಮತ್ತು ತಾವುಗಳು ಒಪ್ಪಿಕೊಂಡ ಮೇಲೆ ಏನು ಮಾಡಬೇಕೆಂಬ ತೀರ್ಮಾನವನ್ನು ಮಾನ್ಯ ಮಂತ್ರಿಗಳು ನನಗೆ ಬಿಡುವ ಮೂಲಕ ಬಹಳ ಗಂಭೀರವಾದ ಇಕ್ಕಟ್ಟಿನ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಈಗ ಒಂದು ಪ್ರಕಟಣೆ ಇದೆ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 3. ಪ್ರಕಟಣೆ

**ಸಭಾಪತಿಯವರು:–** “ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 9ರ ಮೇರೆಗೆ” ಮಾನ್ಯ ಸಭಾಪತಿಯವರ ಹಾಗೂ ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಗ್ರಹಣ ಮಾಡಲು, ಈ ಮುಂದಿನ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ;

1) ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ,
2) ಶ್ರೀ ಕೆ.ಸಿ.ಕೊಂಡಯ್ಯ,
3) ಶ್ರೀ ಮರಿತಿಬ್ಬೇಗೌಡ
4) ಶ್ರೀ ರಘುನಾಥ್ ರಾವ್ ಮಲ್ಕಾಪೂರೆ.

ಎಲ್ಲಾ ಸದಸ್ಯರ ಮಾತಿಗೆ ಗೌರವ ಕೊಡುವುದು ಮಾನ್ಯ ಸಭಾಪತಿಯವರ ಸ್ಥಾನದಲ್ಲಿರುವವರ ಕರ್ತವ್ಯವಾಗಿರುತ್ತದೆ. ಅಂದರೆ, ನಾನು ಸದನವನ್ನು ನಡೆಸಬೇಕೆನ್ನುವವರ ಮಾತನ್ನೂ ಒಪ್ಪಬೇಕು ಮತ್ತು ಸದನವನ್ನು ಮುಂದೂಡಬೇಕೆನ್ನುವವರ ಮಾತನ್ನು ಸಹ ಒಪ್ಪಬೇಕು. ನನಗೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ನಾನು ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳಿದ್ದೇನೆ. ನಾನು ಸದನದಲ್ಲಿ ಎಲ್ಲರ ಭಾವನೆಗಳನ್ನು ಗೌರವಿಸುತ್ತೇನೆ ಮತ್ತು ಆ ಹಿನ್ನೆಲೆಯಲ್ಲಿ ಸರ್ಕಾರ ಈಗಾಗಲೇ ತನ್ನ ನಿರ್ಧಾರವನ್ನು ಪ್ರಕಟಿಸಿದೆ. ಈಗಾಗಲೇ ಕೆಳಮನೆಯಲ್ಲಿ ಸದನವನ್ನು ಮುಂದೂಡಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಈಗ ಕೆಳಮನೆಯಲ್ಲಿ ಸದನವನ್ನು ಮುಂದೂಡಿದರೂ ಸಹ ನಮ್ಮ ಸದನವನ್ನು ನಡೆಸಬೇಕೆಂಬುದು ನನ್ನ ಅಭಿಲಾಷೆ. ಏಕೆಂದರೆ, ಸದನವನ್ನು ನಡೆಸುವುದಕ್ಕೆ ಎಷ್ಟೋ ಕೋಟಿ ಕೋಟಿ ಹಣವನ್ನು ಖರ್ಚು ಮಾಡುತ್ತೇವೆ. ಇಲ್ಲಿ ಹತ್ತು ದಿನಗಳ ಕಾಲ ಸದನ ನಡೆಯುತ್ತದೆ. ಈಗ ಉತ್ತರ ಕರ್ನಾಟಕ ಭಾಗದ ಅನೇಕ ಸಮಸ್ಯೆಗಳಿವೆ. ಇಂತಹದರಲ್ಲೂ ಸಹ ನಾವು ಸದನವನ್ನು ನಡೆಸಿ, ಇದು ಮಾದರಿಯಾದಂತಹ ಸದನವೆಂದು ತೋರಿಸಬೇಕೆಂಬುದು ನನ್ನ ಆಸೆಯಾಗಿತ್ತು. ಆದರೆ, ಎಲ್ಲರಿಗೂ ಸಹ ಗೌರವವನ್ನು ಕೊಟ್ಟು, ಸದನವನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 11ನೇ ಡಿಸೆಂಬರ್ ಮಾಹೆ 2018ರ ಮಂಗಳವಾರದಂದು ಬೆಳಿಗ್ಗೆ 10–00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "